ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಬುಧವಾರ, ಏಪ್ರಿಲ್ 24, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 343 RNI : 27369/75

janathavani@mac.com
www.janathavani.com
08192 254736 91642 99999



**ರಥೋತ್ಸವ** ದಾವಣಗೆರೆ ತಾಲ್ಲೂಕು ಆನಗೋಡು ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವವು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಂಗಳವಾರ ಸಂಜೆ ಸಂಭ್ರಮದಿಂದ ಜರುಗಿತು.

## ಮುರುಘಾ ಶರಣರ ಜಾಮೀನು ರದ್ದು

### ವಾರದಲ್ಲಿ ನ್ಯಾಯಾಂಗ ಬಂಧನಕ್ಕೆ ತೆರಳುವಂತೆ ಆರೋಪಿಗೆ 'ಸುಪ್ರೀಂ' ಸೂಚನೆ



ನವದೆಹಲಿ, ಏ. 23 - ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದೆ. ಈ ಮೂಲಕ ಮತ್ತೆ ಸ್ವಾಮೀಜಿ ಜೈಲು ಸೇರಲಿದ್ದಾರೆ.

ಕೆಲ ತಿಂಗಳುಗಳ ಹಿಂದೆ ಕರ್ನಾಟಕ ಹೈಕೋರ್ಟ್ ಮುರುಘಾ ಶ್ರೀಗಳಿಗೆ ಷರತ್ತುಬದ್ಧ ಜಾಮೀನು ನೀಡಿತ್ತು. ನಂತರ ಶರಣರು ದಾವಣಗೆರೆಯಲ್ಲಿ ಉಳಿದುಕೊಂಡಿದ್ದರು. ಆದರೆ ಆರೋಪಿ ಬಂಧನದಿಂದ ಹೊರಗಿದ್ದು, ಸಾಕ್ಷ್ಯಗಳನ್ನು ನಾಶಪಡಿಸಬಹುದು ಎಂದು ಮಾಜಿ ಸಚಿವ ಹೆಚ್. ಏಕಾಂತಯ್ಯ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಶ್ರೀಗಳ ಜಾಮೀನು ರದ್ದು ಕೋರಿ ಏಕಾಂತಯ್ಯ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಜಾಮೀನು ರದ್ದುಗೊಳಿಸಿ, ನಾಲ್ಕು ತಿಂಗಳ ಕಾಲ ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದೆ.

ಒಂದು ವಾರದಲ್ಲಿ ನ್ಯಾಯಾಂಗ ಬಂಧನಕ್ಕೆ ತೆರಳುವಂತೆ ಆರೋಪಿ ಮುರುಘಾ ಶ್ರೀಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಇನ್ನು 4 ತಿಂಗಳಲ್ಲಿ ತನಿಖೆ ಪೂರ್ಣಗೊಳ್ಳದಿದ್ದರೆ ಶರಣರ ನ್ಯಾಯಾಂಗ ಬಂಧನದ ಅವಧಿಯನ್ನು ಇನ್ನೆರಡು ತಿಂಗಳ ಕಾಲ ವಿಸ್ತರಣೆ ಮಾಡಬಹುದು. 2022 ಆಗಸ್ಟ್ 31 ರಂದು ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಮುರುಘಾ ಶರಣರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಸೆಪ್ಟೆಂಬರ್ 1ರಂದು ಅವರ ಬಂಧನ ವಾಗಿತ್ತು. 2023 ನವೆಂಬರ್ 16ರಂದು ಷರತ್ತು ಬದ್ಧ ಜಾಮೀನು ನೀಡಲಾಗಿತ್ತು.

## ಮಠ ಅವಿಭಕ್ತ ಕುಟುಂಬದಂತೆ

### ಭಕ್ತರು ಅವಿಭಕ್ತ ಕುಟುಂಬದ ಸದಸ್ಯರಿದ್ದಂತೆ: ತರಳಬಾಳು ಶ್ರೀ



ದಾವಣಗೆರೆ, ಏ. 23- ಮಠ ಅವಿಭಕ್ತ ಕುಟುಂಬ ಇದ್ದಂತೆ. ಭಕ್ತರೆಲ್ಲರೂ ಅವಿಭಕ್ತ ಕುಟುಂಬದ ಸದಸ್ಯರಿದ್ದಂತೆ ಎಂದು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಆನಗೋಡು ಶ್ರೀ ಮರಳಸಿದ್ದೇಶ್ವರ ರಥೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಆಶೀರ್ವಚನ ನೀಡಿದರು.

ಮಠ ಚಲಾಯಿಸದವರಿಗೆ ಸರ್ಕಾರದ ಸೌಲಭ್ಯಗಳನ್ನು ನಿಲ್ಲಿಸಬೇಕು ಎಂದು ಶ್ರೀಗಳು ಅಭಿಪ್ರಾಯಿಸಿದರು. ಪಕ್ಷಾಂತರ ಮಾಡುವುದನ್ನು ನಿಷೇಧ ಮಾಡ ಬೇಕು. 5 ವರ್ಷಗಳ ಕಾಲ ಪಕ್ಷದ ಸಕ್ರಿಯ ಸದಸ್ಯನಾದವರಿಗೆ ಟಿಕೆಟ್ ನೀಡುವಂತಹ ಕಾನೂನು ಜಾರಿ ಮಾಡಬೇಕು ಎಂದು ಶ್ರೀಗಳು ಆಗ್ರಹಿಸಿದರು.

ಭಕ್ತರಿಗೆ ಸರ್ಕಾರದಿಂದ ಆಗಬೇಕಾದ ಕೆಲಸಗಳನ್ನು ಮಾಡಿಸುವುದು ನಮ್ಮ ಜವಾಬ್ದಾರಿ. ಮುಂದಿನ ದಿನಗಳಲ್ಲಿ ತುಂಗಭದ್ರಾ ನದಿಯಿಂದ ನೀರು ಹರಿಸಲು ಇರುವ ತೊಂದರೆಗಳನ್ನು ನಿವಾರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಶೇ.90ರಷ್ಟು ಕೆಲಸಗಳಾಗಿವೆ. ಆದರೆ ನ್ಯಾಯಾಲಯದಲ್ಲಿದ್ದ ದಾವೆಯಿಂದ ತಡವಾಗಿತ್ತು. ಆ ದಾವೆಯನ್ನು ಈಗ ನಿವಾರಿಸಲಾಗಿದೆ.

ಬರುವ ಮಳೆಗಾಲದಲ್ಲಿ ಈ ಯೋಜನೆಯಿಂದ ಹೊಳಲ್ಕೆರೆ, ಮಾಯಕೊಂಡ, ಚನ್ನಗಿರಿ, ಹೊನ್ನಾಳಿ, ಚಿತ್ರದುರ್ಗ ತಾಲ್ಲೂಕಿನ ಕೆರೆಗಳಿಗೆ ನೀರು ಹರಿಸಲಾಗುತ್ತದೆ ಎಂದರು.

ಸಾಧು ಸದ್ಧರ್ಮ ವೀರಶೈವ ಸಮಾಜ ಸಂಘದ ಅಧ್ಯಕ್ಷ ಎಚ್.ಆರ್ ಬಸವರಾಜಪ್ಪ ಮಾತನಾಡಿ, ಸಮ ಸಮಾಜ ನಿರ್ಮಾಣ ಮಾಡಲು ಹೋರಾಟ ಮಾಡಿದ ಮರುಳಸಿದ್ಧರ ಇತಿಹಾಸದಿಂದ ಮೈನವಿರೇಳುತ್ತದೆ. ಮೂಢನಂಬಿಕೆ ವಿರುದ್ಧ ಹೋರಾಡಿದ ಮರುಳಸಿದ್ಧರ ಆಶಯದಂತೆ ವೈಚಾರಿಕ ಅರಿವನ್ನು ಮೂಡಿಸಿಕೊಳ್ಳಬೇಕು ಎಂದರು.

ರಥದ ಬಾವುಟವನ್ನು 2.60 ಲಕ್ಷಕ್ಕೆ ಕೊಗ್ಗನೂರು ಹೇಮಂತರಾಜ್ ಹರಾಜು ಮೂಲಕ ತಮ್ಮದಾಗಿಸಿಕೊಂಡರು. ವಿಧಾನ ಸಭಾ ಕ್ಷೇತ್ರದ ಶಾಸಕ ಬಸವಂತಪ್ಪ, ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ ಗೌಡರು, ಹಾಲುವರ್ತಿ ಮಹೇಶ್ವರಪ್ಪ, ಬಿ. ವಾಮದೇವಪ್ಪ, ಆನೆಕೊಂಡ ಲಿಂಗರಾಜ ಮುಂತಾದವರು ಇದ್ದರು.

## ಬಕೆಟ್, ಪೆನ್‌ಡ್ರೈವ್, ಸಿಲಿಂಡರ್

### ಅಭ್ಯರ್ಥಿಗಳಿಗೆ ಸಂಖ್ಯೆ, ಚಿಹ್ನೆ ಹಂಚಿಕೆ ಮಾಡಿದ ಆಯೋಗ



ದಾವಣಗೆರೆ, ಏ.23- ದಾವಣಗೆರೆ ಲೋಕಸಭಾ ಚುನಾವಣಾ ಕಣದಲ್ಲಿ ಅಂತಿಮವಾಗಿ 30 ಅಭ್ಯರ್ಥಿಗಳಿದ್ದು, ಎಲ್ಲಾ ಅಭ್ಯರ್ಥಿಗಳಿಗೂ ಕ್ರಮಸಂಖ್ಯೆ ಹಾಗೂ ಪಕ್ಷವಾರು ಚಿಹ್ನೆಯನ್ನು ಹಂಚಿಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

**ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು:**

1. ಗಾಯತ್ರಿ ಸಿದ್ದೇಶ್ವರ- ಭಾರತೀಯ ಜನತಾ ಪಾರ್ಟಿ (ಕಮಲ), 2. ಡಾ. ಪ್ರಭಾ ಮಲ್ಲಿಕಾರ್ಜುನ್-ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಹಸ್ತ), 3. ಡಿ.ಹನುಮಂತಪ್ಪ, ಬಹುಜನ ಸಮಾಜ ಪಾರ್ಟಿ (ಆನೆ)

**ನೋಂದಾಯಿತ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು:**

4. ಈಶ್ವರ ಶೇಂಗಾ-ಉತ್ತಮ ಪ್ರಜಾಕೀಯ ಪಾರ್ಟಿ (ಚಪ್ಪಲಿಗಳು), 5. ಅಣಬೇರು ತಿಪ್ಪೇಸ್ವಾಮಿ - ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್), (ಆಟೋ-ರಿಕ್ಷಾ), 6. ಎಂ.ಪಿ.ಖಲಂದರ್-ಕಂಟ್ರಿ ಸಿಟಿಜನ್ ಪಾರ್ಟಿ, (ತೆಂಗಿನ ತೋಟ) 7. ದೊಡ್ಡೇಶಿ ಹೆಚ್.ಎಸ್- ಜನಹಿತ ಪಕ್ಷ, (ಸ್ಟೆತಸ್ಕೋಪ್) 8. ರುದ್ರೇಶ್ ಕೆ.ಹೆಚ್-ಸಮಾಜ ವಿಕಾಸ ಕ್ರಾಂತಿ ಪಾರ್ಟಿ (ವಿದ್ಯುತ್ ಕಂಬ), 9. ವೀರೇಶ್.ಎಸ್ (ಲಯನ್ ವೀರೇಶ್) -ರಾಣಿ ಚೆನ್ನಮ್ಮ ಪಾರ್ಟಿ, (ಉಂಗುರ), 10. ಕೆ.ಎಸ್. ವೀರಭದ್ರಪ್ಪ-ಕರ್ನಾಟಕ ರಾಷ್ಟ್ರ ಸಮಿತಿ (ಬ್ಯಾಟರಿ ಟಾರ್ಚ್), 11. ಎಂ.ಜಿ.ಶ್ರೀಕಾಂತ್-ನವಭಾರತ ಸೇನಾ, (ಬೆಂಕಿ ಪೊಟ್ಟಣ) 12. ಎಂ.ಸಿ. ಶ್ರೀನಿವಾಸ್- ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ, (ಏಳು ಕಿರಣಗಳಿರುವ ಪೆನ್ನಿನ ನಿಬ್)

**ಪಕ್ಷೇತರ ಅಭ್ಯರ್ಥಿಗಳು:**

13. ಅಬ್ದುಲ್ ನಜೀರ್ ಅಹಮದ್ (ರೋಡ್ ರೋಲರ್) 14. ಎ. ಕೆ.ಗಣೇಶ್ (ಬೀಸುಕಲ್ಲು) 15. ಜಿ. ಎಂ.ಗಾಯತ್ರಿ ಸಿದ್ದೇಶಿ, (ಹೂ ಕೋಸು) 16. ಟಿ.ಚಂದ್ರು (ಗ್ರಾಮ ಫೋನ್) 17. ಟಿ.ಜಬೀನಾ ಆಪಾ (ಕಲ್ಲಂಗಡಿ), 18. ತಸ್ಲೀಮ್ ಬಾನು (ಬ್ಯಾಟ್), 19. ಪರವೀಜ್ ಹೆಚ್ (ವಜ್ರ) 20. ಪೆದ್ದಪ್ಪ.ಎಸ್ (ಕೇರಂ ಬೋರ್ಡ್) 21. ಬರಕತ್ ಅಲಿ (ಅಲಮಾರು) 22. ಜಿ.ಎಂ.ಬರ್ಕತ್ ಅಲಿ ಬಾಷ (ಗಿಫ್ಟ್‌ಪ್ಯಾಕ್) 23. ಮಹಬೂಬ್ ಬಾಷ (ಸ್ಪಾನರ್) 24. ಮೊಹ್ಮದ್ ಹಯಾತ್.ಎಂ (ಬ್ಯಾಟ್ಸ್‌ಮನ್) 25. ಮಂಜು ಮಾರಿಕೊಪ್ಪ (ಟ್ರಕ್), 26. ರವಿನಾಯ್ಕ. ಬಿ (ಕರಣೆ) 27. ರಷೀದ್ ಖಾನ್ (ದೂರವಾಣಿ) 28. ಜಿ.ಬಿ.ವಿನಯ್ ಕುಮಾರ್ (ಗ್ಯಾಸ್ ಸಿಲಿಂಡರ್) 29. ಸಲೀಂ.ಎಸ್ (ಪೆನ್‌ಡ್ರೈವ್ ) ಹಾಗೂ 30. ಸೈಯದ್ ಜಬೀವುಲ್ಲಾ.ಕೆ (ಬಕೆಟ್ ) ಚಿಹ್ನೆಯಾಗಿದೆ.

## ನಕಲಿ ಪದವಿಗಳ ಬಗ್ಗೆ ಯು.ಜಿ.ಸಿ. ಎಚ್ಚರಿಕೆ

ನವದೆಹಲಿ, ಏ. 23 – ಆನ್‌ಲೈನ್ ಮೂಲಕ ನಕಲಿ ಪದವಿಗಳನ್ನು ನೀಡುತ್ತಿರುವ ಬಗ್ಗೆ ಸಾರ್ವಜನಿಕರು ಎಚ್ಚರವಾಗಿರಬೇಕು. ವಿಶೇಷವಾಗಿ '10 ದಿನಗಳ ಎಂ.ಬಿ.ಎ.' ಎಂಬ ರೀತಿಯ ಕೋರ್ಸ್‌ಗಳ ಬಗ್ಗೆ ಎಚ್ಚರ ವಹಿಸಲು ಯು.ಜಿ.ಸಿ. ತಿಳಿಸಿದೆ.

ಕೆಲ ವ್ಯಕ್ತಿಗಳು ಹಾಗೂ ಸಂಘಟನೆಗಳು ಆನ್‌ಲೈನ್ ಮೂಲಕ ಕೋರ್ಸ್ ನೀಡುವುದಾಗಿ ಹೇಳುತ್ತಿವೆ. ಅವುಗಳ **(4ನೇ ಪುಟಕ್ಕೆ)**

## 28ರಂದು ನಗರಕ್ಕೆ ಪ್ರಧಾನಿ ಮೋದಿ



ದಾವಣಗೆರೆ, ಏ. 23 – ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಪ್ರಚಾರಕ್ಕಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಗರಕ್ಕೆ ಆಗಮಿಸಲಿದ್ದಾರೆ.

ನಗರದ ಹೈಸ್ಕೂಲ್ ಮೈದಾನದಲ್ಲಿ ಇದೇ ದಿನಾಂಕ 28ರ **(4ನೇ ಪುಟಕ್ಕೆ)**

## ದಕ್ಷಿಣ ಭಾರತದಲ್ಲೂ ಬಿಸಿ ಗಾಳಿ

ನವದೆಹಲಿ, ಏ. 23 – ಪೂರ್ವ ಭಾಗದಲ್ಲಿ ಹರಡಿದ್ದ ಬಿಸಿಗಾಳಿಯ ಪ್ರಕೋಪ ಈಗ ದಕ್ಷಿಣದ ಭಾಗಗಳಿಗೂ ಹರಡಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಒಡಿಶಾ, ಪಶ್ಚಿಮ ಬಂಗಾಳದ ಗಂಗಾ ಬಯಲು, ಆಂಧ್ರ ಪ್ರದೇಶ ಹಾಗೂ ತಮಿಳು ನಾಡುಗಳಲ್ಲಿ ತಾಪಮಾನ ವಾಡಿಕೆಗಿಂತ ಎರಡರಿಂದ ಏಳು ಡಿಗ್ರಿ ಸೆಲ್ಷಿಯಸ್ ಹೆಚ್ಚಾಗಿದೆ ಎಂದು ಇಲಾಖೆ ಹೇಳಿದೆ.

ಆಂಧ್ರ ಪ್ರದೇಶದ ಅನಂತಪುರದಲ್ಲಿ ತಾಪಮಾನ 43.5 ಡಿಗ್ರಿ ಸೆಲ್ಷಿಯಸ್ ಹಾಗೂ ಕರ್ನೂಲಿನಲ್ಲಿ 43.2 ಡಿಗ್ರಿ ಸೆಲ್ಷಿಯಸ್‌ಗೆ ತಲುಪಿದೆ. ತಮಿಳುನಾಡಿನ ಸೇಲಂನಲ್ಲಿ 42.3 ಡಿಗ್ರಿ ಸೆಲ್ಷಿಯಸ್ ಹಾಗೂ ಈರೋಡ್‌ನಲ್ಲಿ 42 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಈ ತಿಂಗಳಲ್ಲಿ ಎರಡನೇ **(2ನೇ ಪುಟಕ್ಕೆ)**

## ಕೇಂದ್ರದಲ್ಲಿ ಕಾಂಗ್ರೆಸ್ ಬಂದರೆ ಬಡ ಕುಟುಂಬಕ್ಕೆ 15 ಸಾವಿರ ರೂ.

### ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್



ದಾವಣಗೆರೆ, ಏ. 23 - ಕೇಂದ್ರದಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಡ ಕುಟುಂಬಗಳಿಗೆ ತಿಂಗಳಿಗೆ 13-15 ಸಾವಿರ ರೂ. ಸಿಗಲಿದೆ. ಇದರಿಂದ ಆರ್ಥಿಕ ಬೆಳವಣಿಗೆಯಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದ್ದಾರೆ.

ನಗರದ ರೇಣುಕ ಮಂದಿರದಲ್ಲಿ ಆಯೋಜಿಸಲಾಗಿದ್ದ ಹೆಚ್.ಎಸ್. ನಾಗರಾಜ್ ಮತ್ತು ಅಭಿಮಾನಿಗಳ ಕಾಂಗ್ರೆಸ್ ಸೇರ್ಪಡೆ ಹಾಗೂ ಲೋಕಸಭಾ ಚುನಾವಣಾ ಪ್ರಚಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳಿಂದ ಬಡ ಕುಟುಂಬಗಳಿಗೆ ತಿಂಗಳಿಗೆ 5-6 ಸಾವಿರ ರೂ. ದೊರೆಯಲಿದೆ. ಪ್ರತಿ ವರ್ಷಕ್ಕೆ ಬಡ ಕುಟುಂಬಗಳಿಗೆ 1 ಲಕ್ಷ ರೂ. ನೀಡುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ. ಕೇಂದ್ರದಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಬಡ ಕುಟುಂಬಗಳಿಗೆ ತಿಂಗಳಿಗೆ ಒಟ್ಟು 13-15 ಸಾವಿರ ರೂ. ಸಿಗಲಿದೆ ಎಂದು ಸಚಿವರು ಹೇಳಿದರು.

ಬಡ ಕುಟುಂಬಗಳಿಗೆ ಹೆಚ್ಚಿನ ಹಣ ತಲುಪಿದರೆ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲಿದೆ. ಕುಟುಂಬದ ಬೇರೆ ಅಭಿವೃದ್ಧಿ ಕಾರ್ಯಗಳೂ ಸಾಧ್ಯವಾಗುತ್ತವೆ. ಇದರಿಂದ ದೇಶದ ಆರ್ಥಿಕ ಅಭಿವೃದ್ಧಿಯಾಗುತ್ತದೆ ಎಂದವರು ಹೇಳಿದರು.

ಪಕ್ಷಕ್ಕೆ ಸೇರಿರುವ ನಾಗರಾಜ್, ಹರಿಹರದ ಕಡೆ ಹೆಚ್ಚು ಗಮನ ಹರಿಸಬೇಕು. ಕಾಂಗ್ರೆಸ್ ನಾಯಕರಾದ ಎಸ್. ರಾಮಪ್ಪ, ವಾಗೀಶ ಸ್ವಾಮಿ ಹಾಗೂ ನಂದಿಗಾವಿ ಶ್ರೀನಿವಾಸ್ ಜೊತೆಗೂಡಿ ಸಂಘಟನೆ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೆಚ್.ಎಸ್. ನಾಗರಾಜ್, ನಮ್ಮ ತಂದೆ ಹೆಚ್. ಶಿವಪ್ಪ ಹಾಗೂ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ನಿಕಟವರ್ತಿಗಳಾಗಿದ್ದರು. ಆದರೆ, ಜನತಾ ಬಜಾರ್ ಚುನಾವಣೆಯಲ್ಲಿ ನಮ್ಮ ಕಾರಣದಿಂದಾಗಿ ಅವರು ದೂರವಾದರು. ಈಗ ಕಾಂಗ್ರೆಸ್‌ಗೆ ಮರಳಿರುವುದು ಮತ್ತೆ ಮನೆಗೆ ಬಂದಂತಹ ಭಾವನೆ ತಂದಿದೆ ಎಂದರು.

ಬಿಜೆಪಿಯಲ್ಲಿ ಕಾರ್ಯಕರ್ತರನ್ನು ಪ್ರೀತಿ ವಿಶ್ವಾಸದಿಂದ ನೋಡುವ ಮನೋಭಾವ ಇಲ್ಲ. ಕಾರ್ಯಕರ್ತರ ಬಗ್ಗೆ ಸೌಜನ್ಯವೂ ಇಲ್ಲ. ಮುಖಂಡರನ್ನು ಬಳಸಿಕೊಂಡು ಹೊರ ಹಾಕಲಾಗುತ್ತಿದೆ ಎಂದು ಟೀಕಿಸಿದರು.

ಮಾಜಿ ಶಾಸಕ ಎಸ್. ರಾಮಪ್ಪ ಮಾತನಾಡಿ, ದೇಶದಲ್ಲೀಗ ಕಾಂಗ್ರೆಸ್ ಪರ ವಾತಾವರಣ ಇದೆ. ಪ್ರಭಾ ಮಲ್ಲಿಕಾರ್ಜುನ್ ಅವರು ಸಂಸತ್ತಿಗೆ ತೆರಳಲಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಧಾನ ಮಂತ್ರಿಯಾಗಲಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ವಾಗೀಶ ಸ್ವಾಮಿ ಮಾತನಾಡಿ, ಗ್ಯಾರಂಟಿ ಯೋಜನೆಗಳು ಈಗ ಜನಪ್ರಿಯವಾಗಿವೆ. ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ ಹಾಗೂ ಸಚಿವ ಮಲ್ಲಿಕಾರ್ಜುನ್ ಮೇಲಿನ ಭರವಸೆಯಿಂದ ಪಕ್ಷಕ್ಕೆ ಸೇರಿದ್ದೇವೆ ಎಂದರು.

ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್ ಮಾತನಾಡಿ, ದಾವಣಗೆರೆ ನಗರ ಪಾಲಿಕೆಯ ಬಿಜೆಪಿಯ 6 ಹಾಗೂ ಜೆಡಿಎಸ್‌ನ 1 **(4ನೇ ಪುಟಕ್ಕೆ)**

## ಜಗಳೂರಿಗೆ ಏಕಲವ್ಯ ಮಾದರಿ ಶಾಲೆ ತರುವೆ: ಗಾಯತ್ರಿ

### ಎಸ್.ವಿ.ಆರ್., ಎಚ್.ಪಿ.ಆರ್ ಜೊತೆ ಮತಯಾಚನೆ, ಹನುಮ ಜಯಂತಿಯಲ್ಲಿ ಭಾಗಿ



ಜಗಳೂರು, ಏ.23- ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ನರೇಂದ್ರ ಮೋದಿ ಜೀ ನೇತೃತ್ವದ ಕೇಂದ್ರ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಆ ಯೋಜನೆಗಳ ಭಾಗವಾಗಿ ಪರಿಶಿಷ್ಟ ಪಂಗಡದ ಜನರೇ ಹೆಚ್ಚಾಗಿರುವ ಜಗಳೂರು ತಾಲೂಕಿನಲ್ಲಿ ಏಕಲವ್ಯ ಮಾದರಿ ವಸತಿ ಶಾಲೆ ನಿರ್ಮಿಸುತ್ತೇನೆ ಎಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ತಿಳಿಸಿದರು.

ಜಗಳೂರು ತಾಲ್ಲೂಕಿನ ಹಾಲೇಕಲ್ಲು, ಬಿಳಿಚೋಡು, ಗುತ್ತಿದುರ್ಗ ಗ್ರಾಮದಲ್ಲಿ ಮಾಜಿ ಶಾಸಕರಾದ ಎಸ್.ವಿ.ರಾಮಚಂದ್ರಪ್ಪ, ಎಚ್.ಪಿ. ರಾಜೇಶ್ ಜೊತೆಯಲ್ಲಿ ಮತಯಾಚಿಸಿ ಅವರು ಮಾತನಾಡಿದರು.

ಸಂಸದ ಜಿ.ಎಂ.ಸಿದ್ದೇಶ್ವರ ಅವರು ಜಗಳೂರು ತಾಲೂಕಿಗೆ ಏಕಲವ್ಯ ಮಾದರಿ ವಸತಿ ಶಾಲೆ ಮಂಜೂರು ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದಾರೆ. ನಾನು ಸಂಸದಳಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಪ್ರಥಮ ಆದ್ಯತೆ ಮೇರೆಗೆ ಏಕಲವ್ಯ ಶಾಲೆ ನಿರ್ಮಾಣಕ್ಕೆ ಒತ್ತು ನೀಡುತ್ತೇನೆ ಎಂದರು.

ಈಗಾಗಲೇ ದೇಶಾದ್ಯಂತ 467 ಏಕಲವ್ಯ ಮಾದರಿ ವಸತಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಈ ಶಾಲೆಗಳ ಸಂಖ್ಯೆಯನ್ನು 1000 ಕ್ಕೆ ಏರಿಸುವ ಸಂಕಲ್ಪವನ್ನು ಮೋದಿ ಜೀ ಸರ್ಕಾರ ಮಾಡಿದೆ. ಆ ಸಾವಿರದಲ್ಲಿ ಜಗಳೂರು ತಾಲೂಕಿನ 1 ಶಾಲೆಯೂ ಇದೆ. ಅದಕ್ಕಾಗಿ ಈಗಾಗಲೇ ಮಾಗಡಿ ಬಳಿ 10 ಎಕರೆ ಜಮೀನು ಗುರುತಿಸಲಾಗಿದೆ. ಇಲ್ಲಿ ಏಕಲವ್ಯ ಮಾದರಿ ಶಾಲೆ ಪ್ರಾರಂಭವಾದರೆ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬಹುದು. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವುದು ನನ್ನ ಸಂಕಲ್ಪ ಎಂದು ತಿಳಿಸಿದರು.

ಮಾಜಿ ಶಾಸಕ ಎಸ್.ವಿ.ರಾಚಂದ್ರಪ್ಪ ಮಾತನಾಡಿ, ಜಗಳೂರು ಅತ್ಯಂತ ಹಿಂದುಳಿದ ತಾಲ್ಲೂಕಾಗಿದ್ದು, ಶಾಶ್ವತ ನೀರಾವರಿ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸಿದ್ದೇಶ್ವರ ಮತ್ತು ಯಡಿಯೂರಪ್ಪ ಅವರು ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ಕೊಟ್ಟರು. ಅವರ ದೂರದೃಷ್ಟಿ ಚಿಂತನೆ ಪರಿಣಾಮ ಕೋಟ್ಯಂತರ **(4ನೇ ಪುಟಕ್ಕೆ)**



**ಹಳೇಪೇಟೆ ಈರಣ್ಣನ ತೇರು ...** ದಾವಣಗೆರೆ ಹಳೇಪೇಟೆ ಶ್ರೀ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಮಂಗಳವಾರ ಸಂಜೆ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

# ಶ್ರೀ ಕೋಟೆ ಆಂಜನೇಯ ಸ್ವಾಮಿ ತೇರು



**ಹರಪನಹಳ್ಳಿ**

ಹರಪನಹಳ್ಳಿ, ಏ. 23 - ಪಟ್ಟಣದ ಶ್ರೀ ಕೋಟೆ ಆಂಜನೇಯ ಸ್ವಾಮಿ ರಥೋತ್ಸವ ಮಂಗಳವಾರ ಸಂಜೆ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ಜರುಗಿತು.

ಪ್ರತಿ ವರ್ಷವೂ ದವನದ ಹುಣ್ಣಿಮೆಯಂದು ಶ್ರೀ ಹನುಮ ಜಯಂತಿಯ ಪ್ರಯುಕ್ತ ಸ್ವಾಮಿಯ ರಥೋತ್ಸವ ಜರುಗುತ್ತದೆ. ಬೆಳಿಗ್ಗೆಯಿಂದಲೇ ಭಕ್ತರು ದೀವಟಿಗೆ ನಮಸ್ಕಾರ ಹಾಕುತ್ತಿದ್ದುದು ಕಂಡು ಬಂದಿತು.

ರಥೋತ್ಸವಕ್ಕಿಂತ ಮುಂಚೆ ಸ್ವಾಮಿಯ ಪಟವನ್ನು ಹರಾಜು ಮಾಡಲಾಯಿತು. ಕಟ್ಟಿಂಗ್ ಶಾಪ್ ಗಣೇಶ್ ಅವರು 30 ಸಾವಿರ ರೂ.ಗೆ ಹರಾಜು ಮಾಡಿಕೊಂಡರೆ, ಎಲಕ್ಕಿ ಹಾರ 27 ಸಾವಿರ ರೂ.ಗೆ ಹರಾಜಾಯಿತು. ಹೂವಿನ ಹಾರವನ್ನು ರವಿ 8 ಸಾವಿರಕ್ಕೆ ಕೂಗಿಕೊಂಡರು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಕೆ.ಹಾಲೇಶ್, ಮುಖಂಡರಾದ ಚಿಕ್ಕೇರಿ ವೆಂಕಟೇಶ್, ದ್ಯಾಮಜ್ಜಿ, ದಂಡೆಪ್ಪ, ಹೆಚ್ ವಿ.ವೇಣು ಗೋಪಾಲ್, ಬೇಕರಿ ಮಂಜುನಾಥ್, ರಾಜು ಪೂಜಾರ್, ಜಂಗ್ಲಿ ಅಂಜಿನಪ್ಪ, ದಾಸಪ್ಪ, ನಿಟ್ಟೂರು ತಿಮ್ಮಣ್ಣ, ಪ್ರಧಾನ ಅರ್ಚಕ ಮಾರುತಿ ಪೂಜಾರ್, ಪಟ್ನಾಮದ ಪರಶುರಾಮ, ಧರ್ಮಕರ್ತರಾದ ಕಟ್ಟಿ ಹರ್ಷ, ದಂಡಿನ ಹರೀಶ್, ರೈತ ಸಂಘದ ಮುಖಂಡ ದ್ಯಾಮಜ್ಜಿ ಹನುಮಂತಪ್ಪ, ಹೆಚ್.ಎ.ಸುರೇಂದ್ರ ಬಾಬು, ಹೂವುಮಾರ್ ಮಂಜಣ್ಣ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ, ಗಿಡ್ಡಳ್ಳಿ ನಾಗರಾಜ್, ಬಡಗಿ ಮಂಜುನಾಥ್, ಮರಿಯಪ್ಪ, ರಾಯದುರ್ಗದ ಆಲೂರು ಶ್ರೀನಿವಾಸ್, ಕೆಂಗಹಳ್ಳಿ ಪ್ರಕಾಶ್, ಪ್ರತಾಪ್ ಛಲವಾದಿ, ಆದಿ ಧೀರಾಜ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಹೊನ್ನಾಳಿ : ಅಕಾಲಿಕ ಮಳೆಗೆ 90 ಎಕರೆ ಬೆಳೆ ನಷ್ಟ



ಹೊನ್ನಾಳಿ, ಏ.23- ಬಿರುಗಾಳಿ ಸಹಿತ ಸುರಿದ 2-3 ಮಳೆಗೆ ತಾಲ್ಲೂಕಿನ ಕೆಲವು ಗ್ರಾಮಗಳ ಪಪ್ಪಾಯ ಮತ್ತು ಬಾಳೆ ಬೆಳೆ ಹಾಳಾಗಿದೆ ಎಂದು ಹಿರಿಯ ತೋಟಗಾರಿಕಾ ಸಹಾಯಕ ನಿರ್ದೇಶಕರಾದ ಜಿ.ಪಿ. ರೇಖಾ ತಿಳಿಸಿದರು.

ಬೆಳೆ ಹಾನಿಯಾಗಿರುವ ಜಮೀನುಗಳಿಗೆ ಭೇಟಿ ನೀಡಿ ಅವರು ಮಾತನಾಡಿದರು.

ತಾಲ್ಲೂಕಿನ ಅರಕೆರೆ, ಮಾಸಡಿ, ನರಸಗೊಂಡನಹಳ್ಳಿ, ತರಗನಹಳ್ಳಿ ಮತ್ತು ಸಿಂಗಟನಗೆರೆ ಗ್ರಾಮಗಳಲ್ಲಿನ 85 ಎಕರೆ ಬಾಳೆ, 5 ಎಕರೆ ಪಪ್ಪಾಯ ಬೆಳೆ ಗಾಳಿ ಮಳೆಗೆ ಹಾನಿಯಾಗಿದ್ದು, ಕಂದಾಯ ಮತ್ತು ತೋಟಗಾರಿಕಾ ಇಲಾಖೆಯ ವತಿಯಿಂದ ಜಂಟಿ ಸರ್ವೇ ಮಾಡಿ, ಬೆಳೆ ಹಾನಿಯಾಗಿರುವುದರ ಮಾಹಿತಿಯನ್ನು ಜಿಲ್ಲಾ ಮುಖ್ಯ ಕಚೇರಿಗೆ ಕಳುಹಿಸಿಕೊಡಲಾಗುವುದು. ನಂತರ ಎನ್.ಡಿ.ಆರ್.ಎಫ್. ಗೈಡ್ ಲೈನ್ಸ್ ಆಧಾರದ ಮೇಲೆ ಬೆಳೆ ಪರಿಹಾರವನ್ನು ರೈತರಿಗೆ ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ತೋಟಗಾರಿಕಾ ಅಧಿಕಾರಿ ಶಿವಕುಮಾರ್ ನಾಯ್ಕ್ ಮತ್ತು ರೈತರು ಉಪಸ್ಥಿತರಿದ್ದರು.

# ಗ್ರಾಮದೇವತೆ ಹಬ್ಬದಲ್ಲಿ ಪ್ರಾಣಿ ಬಲಿ ನಿಲ್ಲಬೇಕು : ರಟ್ಟಿಹಳ್ಳಿ ಶ್ರೀ



ಮಲೇಬೆನ್ನೂರು, ಏ.23- ಎಷ್ಟೇ ಬರಗಾಲವಿದ್ದರೂ ಜನರಲ್ಲಿ ಭಕ್ತಿಗೆ ಬರವಿಲ್ಲ ಎಂಬುದಕ್ಕೆ ಜಿಗಳಿ ಗ್ರಾಮಸ್ಥರು ಎರಡು ಹೊಸ ದೇವಸ್ಥಾನಗಳನ್ನು ಕಟ್ಟಿಸಿರುವುದೇ ಸಾಕ್ಷಿಯಾಗಿದೆ ಎಂದು ರಟ್ಟಿಹಳ್ಳಿ ಕಬ್ಬಿಣಕಂಥಿಮಠದ ಶ್ರೀ ಶಿವಲಿಂಗ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಗಳಿ ಗ್ರಾಮದಲ್ಲಿ ಮೊನ್ನೆ ಏರ್ಪಾಡಾಗಿದ್ದ ನೂತನವಾಗಿ ನಿರ್ಮಿಸಿರುವ ಶ್ರೀ ಕಲ್ಲೇಶ್ವರ ಮತ್ತು ಗ್ರಾಮದೇವತೆ ಶ್ರೀ ಉಡುಸಲಮ್ಮ ದೇವಿ ದೇವಸ್ಥಾನಗಳ ಉದ್ಘಾಟನೆ ಮತ್ತು ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭದಲ್ಲಿ ಪಾಲ್ಗೊಂಡು ಶ್ರೀಗಳು ಆಶೀರ್ವಚನ ನೀಡಿದರು.

ಗ್ರಾಮದಲ್ಲಿ ಶಾಂತಿ, ಸಮೃದ್ಧಿ ನೆಲೆಸಲು ಗ್ರಾಮದೇವತೆ ದೇವಸ್ಥಾನಗಳನ್ನು ಎಲ್ಲಾ ಕಡೆ ನಿರ್ಮಿಸುತ್ತಾರೆ. ಗ್ರಾಮದೇವತೆ ಹೆಸರಿನಲ್ಲಿ ಆಚರಿಸುವ ಹಬ್ಬಗಳಲ್ಲಿ ಪ್ರಾಣಿ ಬಲಿ ಕೊಡುವ ಪದ್ಧತಿ ನಿಲ್ಲಬೇಕು. ಹಬ್ಬಗಳಲ್ಲಿ ಯುವಕರು ಕುಡಿತಕ್ಕೆ ಹೆಚ್ಚು ಬಲಿಯಾಗುತ್ತಿದ್ದಾರೆಂದು ರಟ್ಟಿಹಳ್ಳಿ ಸ್ವಾಮೀಜಿ ಆತಂಕ ವ್ಯಕ್ತಪಡಿಸಿದರು.

ಯಲವಟ್ಟಿಯ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ಮಾತನಾಡಿ, ಪ್ರಕೃತಿ ಮನುಕುಲಕ್ಕೆ ಪರೋಪಕಾರ ಮಾಡುತ್ತಿದೆ. ಅದರ ಉಪಕಾರ ಪಡೆದ ಯುವಕರು ಸ್ವಾರ್ಥಿಗಳಾಗಿದ್ದಾರೆ. ದಾನ-ಧರ್ಮದ ಕಾರ್ಯಗಳು ಬದುಕಿನಲ್ಲಿ ಬರುವ ದುಃಖ-ಕಷ್ಟಗಳನ್ನು ದೂರ ಮಾಡುತ್ತವೆ ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ದೇವಸ್ಥಾನಗಳು ಗ್ರಾಮಕ್ಕೆ ಕಳಸವಿದ್ದಂತೆ. ದೇವಸ್ಥಾನಗಳಿಂದ ಗ್ರಾಮದ ಭಕ್ತಿ-

**ದೇವಸ್ಥಾನಗಳು ಗ್ರಾಮಕ್ಕೆ ಕಳಸವಿದ್ದಂತೆ : ನಂದಿಗುಡಿ ಶ್ರೀ**

ಭಾವ ಬೆಳೆಯುತ್ತದೆ ಎಂದರು.

ಗ್ರಾಮದ ಮುಖಂಡರಾದ ಗೌಡ್ರ ಬಸವರಾಜಪ್ಪ, ಬಿ.ಎಂ.ದೇವೇಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಗ್ರಾಮದ ಹಿರಿಯ ವೈದ್ಯ ಡಾ. ಟಿ. ಬಸವರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಮಾತನಾಡಿದರು.

ಉಡುಸಲಮ್ಮ ದೇವಸ್ಥಾನ ನಿರ್ಮಾಣಕ್ಕೆ ಜಾಗವನ್ನು ದಾನವಾಗಿ ನೀಡಿದ ನಾಗರಾಜಯ್ಯ, ಚಂದ್ರಯ್ಯ ಸಹೋದರರನ್ನು ಹಾಗೂ ಚಿಂದಿಗೌಡ್ರ ಮಹೇಶ್ವರಪ್ಪ, ಪ್ರಕಾಶ್ ಮತ್ತು ಕಳಸ ದಾನಿಗಳಾದ ಶಿಕ್ಷಕ ಜಿ.ಆರ್.ನಾಗರಾಜ್, ಕಾಯಕದ ಮಲ್ಲಪ್ಪ ಹಾಗೂ ಧರ್ಮಸ್ಥಳ ಯೋಜನಾಧಿಕಾರಿ ವಸಂತ್ ದೇವಾಡಿಗ ಅವರನ್ನು ಸನ್ಮಾನಿಸಲಾಯಿತು.

ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕರಾದ ಹೆಚ್.ಎಸ್.ಶಿವಶಂಕರ್, ಎಸ್.ರಾಮಪ್ಪ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಎಂ. ನಾಗೇಂದ್ರಪ್ಪ, ಜಿ.ಮಂಜುನಾಥ್ ಪಟೇಲ್, ನಿಖಿಲ್ ಕೊಂಡಜ್ಜಿ, ಸಿರಿಗೆರೆ ರಾಜಣ್ಣ, ಹನಗವಾಡಿ ಕುಮಾರ್, ಗುತ್ತೂರು ಹಾಲೇಶ್‌ಗೌಡ, ಬಿ. ವೀರಯ್ಯ, ಕೆ.ಪಿ.ಗಂಗಾಧರ್, ತಾ. ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ ಬಿ ಅಬೀದ್ ಅಲಿ, ಎಲ್ ಬಿ ಹನುಮಂತಪ್ಪ, ಕೊಕ್ಕನೂರು ಆಂಜನೇಯ ಪಾಟೀಲ್, ಕುಂಬಳೂರು ವಾಸು, ದಾವಣಗೆರೆ ತಾ ಪಂ ಮಾಜಿ ಅಧ್ಯಕ್ಷ ಕುಕ್ಕುವಾಡದ ಕೆ.ಎನ್. ಮಂಜುನಾಥ್, ತಿಮ್ಮೇನಹಳ್ಳಿ ರಾಜಣ್ಣ, ಬೇವಿನಹಳ್ಳಿ ಶ್ರೀಕಾಂತ್, ಬಿ.ಕೆ.ಮಹೇಶ್ವರಪ್ಪ, ಗ್ರಾಮದ ನಾಗಸನಹಳ್ಳಿ ಮಹೇಶ್ವರಪ್ಪ, ಬಿ.ಸೋಮಶೇಖರ ಚಾರಿ, ಮಠದ ಹಾಲಯ್ಯ, ಬಿಳಸನೂರು ಚಂದ್ರಪ್ಪ, ಕೆ.ಆರ್. ರಂಗಪ್ಪ, ಡಿ.ಆರ್.ಮಧುಸೂದನ್, ಪೂಜಾರ್ ಮೂಕಪ್ಪ, ಕೆ.ಷಣ್ಮುಖಪ್ಪ, ಹೆಚ್.ಟಿ. ರಂಗನಾಥ್, ಸೋಮಚಂದ್ರಣ್ಣರ ಬಸವರಾಜ್, ಕೆ. ಎಸ್.ನಂದ್ಯಪ್ಪ, ಕ್ಯಾಂಪ್ ಸಿದ್ದಪ್ಪ, ಮುದ್ದಪ್ಪ ಶಂಕ್ರಪ್ಪ, ಬನ್ನಿಕೋಡು ನಾಗರಾಜ್, ಡಾ. ಎನ್.ನಾಗರಾಜ್, ಡಿ.ಎಂ.ಹರೀಶ್, ಕೆ.ಜಿ.ಬಸವರಾಜ್, ಮಾಕನೂರು ಶಿವು, ಬೆಣ್ಣೇರ ನಂದ್ಯಪ್ಪ, ಭೋವಿ ಮಂಜಣ್ಣ, ಬಾರಿಕೇರ ಕೃಷ್ಣ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ನಂದಿಗುಡಿ ಮಠದ ವಟುಗಳಿಂದ ಶ್ರೀ ಕಲ್ಲೇಶ್ವರ ಮೂರ್ತಿ ಪ್ರತಿಷ್ಠಾಪನೆ ಮತ್ತು ಮಲೇಬೆನ್ನೂರಿನ ಶ್ಯಾಮಸುಂದರ್ ಜೋಯ್ಸ್, ಎಂ.ಡಿ.ಮುರುಳೀಧರ್ ರಾವ್ ಸಂಗಡಿಗರಿಂದ ಶ್ರೀ ಉಡುಸಲಮ್ಮ ದೇವಿ ಪ್ರಾಣ ಪ್ರತಿಷ್ಠಾಪನೆ ನೆರವೇರಿತು.

# ಹೆಮ್ಮನಬೇತೂರು ಮರುಳಸಿದ್ದೇಶ್ವರ ರಥೋತ್ಸವ



ದಾವಣಗೆರೆ, ಏ. 23 - ತಾಲ್ಲೂಕಿನ ಹೆಮ್ಮನಬೇತೂರು ಗ್ರಾಮದಲ್ಲಿ ಮರುಳಸಿದ್ದೇಶ್ವರ ಸ್ವಾಮಿಯ ರಥೋತ್ಸವ ಬರದ ನಡುವೆ ವಿಜೃಂಭಣೆಯಿಂದ ನಡೆಯಿತು.

ದೇವಸ್ಥಾನವನ್ನು ಬಾಳೆ ಕಂಬ, ಮಾವಿನ ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕಾರಗೊಳಿಸಲಾಗಿತ್ತು. ದೇವಸ್ಥಾನದಿಂದ ಪಲ್ಲಕ್ಕಿ ಉತ್ಸವದೊಂದಿಗೆ ಬಾಜಾ ಭಜಂತ್ರಿಯೊಂದಿಗೆ ಶ್ರೀ ಮರುಸಿದ್ದ ಸ್ವಾಮಿಯನ್ನು ರಥ ಬೀದಿಯಲ್ಲಿ ಮೆರವಣಿಗೆ ಮೂಲಕ ತಂದು ರಥೋತ್ಸವವನ್ನು ಮೂರು ಸುತ್ತು ಪ್ರದಕ್ಷಣೆ ಹಾಕಿದರು.

ಶ್ರೀ ಮರುಳುಸಿದ್ದೇಶ್ವರ ಸ್ವಾಮಿ ಉತ್ಸವ ಮೂರ್ತಿಯು ರಥ ಏರುತ್ತಿದ್ದಂತೆಯೇ ರಥದ ಗಾಲಿಗೆ ಎಡೆ ಪೂಜೆ ಸಲ್ಲಿಸಿ ಮಹಾಮಂಗಳಾರತಿ ಮಾಡುತ್ತಿದ್ದಂತೆಯೇ ಭಕ್ತರು ಮರುಳು ಸಿದ್ದೇಶ್ವರ ಮಹಾಸ್ವಾಮಿಗೆ ಜಯವಾಗಲಿ ಎಂದು ಜೈಕಾರ ಹಾಕಿದರು.

ನಂತರ ಸ್ವಾಮಿಯ ಪಟ ಹರಾಜು ಕಾರ್ಯಕ್ರಮ ನಡೆಯಿತು. ಭಕ್ತರು ಕಾಯಿ ಒಡೆದು ರಥೋತ್ಸವಕ್ಕೆ ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ರಥ ಬೀದಿಯಲ್ಲಿ ನಿಂತಿದ್ದ ಭಕ್ತರು ರಥ ಚಲಿಸುತ್ತಿದ್ದಂತೆಯೇ ಕೈಮುಗಿದು ಭಕ್ತಿ ಸಮರ್ಪಿಸಿದರು.



# ಹೊನ್ನಾಳಿ : ಬಿರುಗಾಳಿ ಸಹಿತ ಸುರಿದ ಮಳೆ

ಹೊನ್ನಾಳಿ, ಏ.23- ಬಿಸಿಲಿನ ಬೇಗೆಯಿಂದ ತತ್ತರಿಸಿ ಹೋಗಿದ್ದ ಜನತೆಗೆ ಸೋಮವಾರ ಸಂಜೆ ಸುರಿದ ಮಳೆ ತಂಪೆರೆಯಿತು. ಗುಡುಗು - ಸಿಡಿಲಿನ ಆರ್ಭಟ ಜೋರಾಗಿದ್ದಿತು. ಬಿರುಗಾಳಿಗೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿನ ಮರಗಳು ವಿದ್ಯುತ್ ಕಂಬದ ಮೇಲೆ ಬಿದ್ದ ಪರಿಣಾಮ 37ಕ್ಕೂ ಹೆಚ್ಚು ಕಂಬಗಳು ಬಿದ್ದು, ಕೆಲ ಕಾಲ ವಿದ್ಯುತ್ ವ್ಯತ್ಯಯ ಉಂಟಾಗಿದ್ದಿತು.

ಹೊನ್ನಾಳಿ ಹಾಗೂ ಸುತ್ತ-ಮುತ್ತಲಿನ ಹಳ್ಳಿಗಳಲ್ಲಿ ಸಾಧಾರಣ ಮಳೆಯಾಗಿದೆ. ಮಳೆ ಮಾಪನ ಕೇಂದ್ರದಲ್ಲಿ ಹೊನ್ನಾಳಿ ಪಟ್ಟಣ 55.0, ಹರಳಹಳ್ಳಿ 1.4 ಒಟ್ಟು 56.4 ಮಿ.ಮೀ. ಮಳೆಯಾಗಿರುವ ವರದಿಯಾಗಿದೆ. ತುಗ್ಗಲಹಳ್ಳಿ ಗ್ರಾಮದ ರತ್ನಮ್ಮ ಎಂಬುವವರ ಮನೆಯ ಮಹಡಿ ಗೋಡೆ ಗಾಳಿ - ಮಳೆಯ ರಭಸಕ್ಕೆ ಬಿದ್ದಿದ್ದು, ಯಾವುದೇ ಜೀವಹಾನಿಯಾಗಿರುವುದಿಲ್ಲವೆಂದು ಉಪತಹಶೀಲ್ದಾರ್ ಸುರೇಶ್ ಮಾಹಿತಿ ನೀಡಿದರು.

# ತೀವ್ರ ಹವಾಮಾನ ಪರಿಸ್ಥಿತಿಯಿಂದ ಹಣದುಬ್ಬರದ ಅಪಾಯ

ಮುಂಬೈ, ಏ. 23 – ತೀವ್ರ ಹವಾಮಾನ ಪರಿಸ್ಥಿತಿಯಿಂದಾಗಿ ಹಣದುಬ್ಬರದ ಅಪಾಯ ಎದುರಾಗಲಿದೆ ಎಂದು ರಿಸರ್ವ್ ಬ್ಯಾಂಕ್ ತನ್ನ ಏಪ್ರಿಲ್ ತಿಂಗಳ ಪ್ರಕಟಣೆಯಲ್ಲಿ ತಿಳಿಸಿದೆ.


ಗ್ರಾಹಕರ ಬೆಲೆ ಸೂಚ್ಯಂಕ ಆಧರಿತ ಚಿಲ್ಲರೆ ಹಣದುಬ್ಬರ ಮಾರ್ಚ್ ತಿಂಗಳಲ್ಲಿ ಶೇ.4.9ರಷ್ಟಿತ್ತು. ಹವಾಮಾನದ ಜೊತೆಗೆ, ಭೂ ರಾಜಕೀಯ ಉದ್ವಿಗ್ನತೆಯೂ ಕಚ್ಚಾ ತೈಲದ ಬೆಲೆ ಏರಿಕೆಗೆ ಕಾರಣವಾಗಬಹುದು ಎಂದು ತಿಳಿಸಿದೆ.

ಚಿಲ್ಲರೆ ಹಣದುಬ್ಬರವನ್ನು ಆಧರಿಸಿ ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿಯನ್ನು ನಿರ್ಧರಿಸುತ್ತದೆ. ಫೆಬ್ರವರಿ 2023ರ ನಂತರದಿಂದಲೂ ಬಡ್ಡಿ ದರ ಶೇ.6.5ರ ಹಂತದಲ್ಲೇ ಮುಂದುವರೆಸಲಾಗಿದೆ.

# ದಕ್ಷಿಣ ಭಾರತದಲ್ಲೂ ಬಿಸಿ ಗಾಳಿ

(1ನೇ ಪುಟದಿಂದ) ಬಾರಿ ಬಿಸಿ ಅಲೆ ಕಾಣಿಸಿಕೊಂಡಿದೆ. ಇನ್ನೂ ಐದು ದಿನಗಳವರೆಗೆ ಪೂರ್ವ ಹಾಗೂ ದಕ್ಷಿಣ ಭಾಗದಲ್ಲಿ ಬಿಸಿ ಅಲೆಯ ಪ್ರಕೋಪ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಪಶ್ಚಿಮ ಬಂಗಾಳ, ಕರ್ನಾಟಕ, ಒಡಿಶಾ, ತಮಿಳುನಾಡು, ಬಿಹಾರ, ಸಿಕ್ಕಿಂ, ತೆಲಂಗಾಣ, ಉತ್ತರ ಪ್ರದೇಶ ಹಾಗೂ ಜಾರ್ಖಂಡ್‌ಗಳ ಹಲವೆಡೆ ಮುಂದಿನ ಐದು ದಿನಗಳ ಕಾಲ ಬಿಸಿಗಾಳಿ ಪರಿಸ್ಥಿತಿ ಇರಲಿದೆ.



**26ನೇ ಪುಣ್ಯಸ್ಮರಣೆ**



**ಎನ್.ಟಿ. ವಜ್ರಮುನಿ**

ನೀವು ನಮ್ಮನ್ನಗಲಿ ಇಂದಿಗೆ (24.04.2024)
26 ವರ್ಷಗಳು ಕಳೆದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,
**ನಿಬಗೂರು ತಿಪ್ಪೇಸ್ವಾಮಿ ಮತ್ತು ಶ್ರೀಮತಿ ಮುರಿಗೆಮ್ಮ**
ಸಹೋದರಿಯರು, ಮಾವಂದಿರು,
ವಿ. ಕೊಟ್ರೇಶ್, ವಿ. ಚೈತ್ರ, ವಿ. ನೇತ್ರ,
ಸಾರ್ಥಕ್, ಪ್ರೇರಣ. ಹನೀಶ್


# ಎಲೆಬೇತೂರಿನಲ್ಲಿ ಹನುಮ ಜಯಂತಿ ವಿಶೇಷ ಪೂಜೆ



ದಾವಣಗೆರೆ, ಏ. 23- ಎಲೆಬೇತೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿಯ ಪ್ರಯುಕ್ತ ಶ್ರೀ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಶ್ರೀ ಆಂಜನೇಯ ಸ್ವಾಮಿಗೆ ಪಂಚಾಮೃತ ಅಭಿಷೇಕ ನಂತರ ವಸ್ತ್ರ ಅಲಂಕಾರ, ಗಂಧ, ಪುಷ್ಪ, ತುಳಸಿ, ವೀಳ್ಯೆದೆಲೆ, ಬಿಲ್ವಪತ್ರೆ ಅರ್ಚನೆ, ನೈವೇದ್ಯ ನಂತರ ಮಹಾಮಂಗಳಾರತಿ ನಂತರ ಹಯಗ್ರೀವ ಪ್ರಸಾದ ವಿತರಿಸಲಾಯಿತು

ಈ ಪೂಜಾ ಕಾರ್ಯಕ್ರಮದ ವ್ಯವಸ್ಥೆಯನ್ನು ಬಿ.ಪಿ. ನಾಗರಾಜ್ ರಾವ್ ನೇತೃತ್ವದಲ್ಲಿ ಹಾಗೂ ನಾಗರಾಜ್ ಶಾನ್‌ಭೋಗ್ ಪೌರೋಹಿತ್ಯ ನಡೆಯಿತು.

# ಶಾಸಕ ಭರತ್ ರೆಡ್ಡಿ ವಿರುದ್ಧ ಕ್ರಮಕ್ಕೆ ಪತ್ರ ಬರೆದ ಇ.ಡಿ.

ನವದೆಹಲಿ, ಏ. 23 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಬಳ್ಳಾರಿಯ ಶಾಸಕ ಭರತ್ ರೆಡ್ಡಿ ವಿರುದ್ಧ ಕ್ರಮ ತೆಗೆದುಕೊಳ್ಳಲು ಅನುಮತಿ ನೀಡುವಂತೆ ಚುನಾವಣಾ ಆಯೋಗಕ್ಕೆ ಜಾರಿ ನಿರ್ದೇಶನಾಲಯ ಪತ್ರ ಬರೆದಿದೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಮತದಾರರಿಗೆ ಆಮಿಷ ಒಡ್ಡುವುದೂ ಸೇರಿದಂತೆ, 42 ಕೋಟಿ ರೂ.ಗಳ ಅಕ್ರಮ ವಹಿವಾಟು ನಡೆಸಿದ್ದರು ಎಂದು ಆರೋಪಿಸಲಾಗಿತ್ತು.

ರೆಡ್ಡಿ ವಿರುದ್ಧ ಸಂಗ್ರಹಿಸಿರುವ ಮಾಹಿತಿ ಆಧರಿಸಿ ಕ್ರಮ ತೆಗೆದುಕೊಳ್ಳಲು ಅನುಮತಿ ನೀಡುವಂತೆ ರಾಜ್ಯ ಲೋಕಾಯುಕ್ತರಿಗೂ ಜಾರಿ ನಿರ್ದೇಶನಾಲಯ ಪತ್ರ ಬರೆದಿದೆ.

ಅಕ್ರಮ ಗಣಿಗಾರಿಕೆ ಹಾಗೂ ಜಮೀನು ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಿಸಲಾದ ಅಕ್ರಮ ಹಣ ಪ್ರಕರಣದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ ಕಳೆದ ಫೆಬ್ರವರಿ 10ರಂದು ಕರ್ನಾಟಕ ಹಾಗೂ ಆಂಧ್ರ ಪ್ರದೇಶದಲ್ಲಿರುವ ರೆಡ್ಡಿಗೆ ಸಂಬಂಧಿಸಿದ ತಾಣಗಳ ಮೇಲೆ ದಾಳಿ ನಡೆಸಿತ್ತು.

2023ರ ಲೋಕಸಭಾ ಚುನಾವಣೆಗೆ ಮುಂಚಿನ ಕೆಲ ತಿಂಗಳಲ್ಲಿ ಭರತ್ ರೆಡ್ಡಿ 42 ಕೋಟಿ ರೂ.ಗಳ ನಗದನ್ನು ಅಕ್ರಮವಾಗಿ ಸಂಗ್ರಹಿಸಿದ್ದು ಕಂಡು ಬಂದಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿತ್ತು.

ಈ ಹಣದಲ್ಲಿ ಪ್ರಮುಖ ಭಾಗವನ್ನು ಮತದಾರರಿಗೆ ಚುನಾವಣೆ ವೇಳೆ ಹಂಚಲಾಗಿತ್ತು ಹಾಗೂ ಚುನಾವಣಾ ಸಂಬಂಧಿ ವೆಚ್ಚಕ್ಕೆ ಬಳಸಿಕೊಳ್ಳಲಾಗಿತ್ತು ಎಂದು ಜಾರಿ ನಿರ್ದೇಶನಾಲಯದ ಮೂಲಗಳು ತಿಳಿಸಿವೆ. ಈ ರೀತಿಯ ಅಕ್ರಮ ಹಣದ ಬಳಕೆ ಜನಪ್ರತಿನಿಧಿ ಕಾಯ್ದೆಯ ಉಲ್ಲಂಘನೆಯಾಗಿದೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ಅನುಮತಿ ನೀಡಬೇಕು ಎಂದು ಚುನಾವಣಾ ಆಯೋಗಕ್ಕೆ ಬರೆದ ಪತ್ರದಲ್ಲಿ ಕೇಳಲಾಗಿದೆ.

# ಲಲಿತಾ ಪಿಯು ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ



ದಾವಣಗೆರೆ, ಏ. 23- ನಗರದ ಲಲಿತಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಗಳಿಸಿದ್ದಾರೆ.

ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಿಂದ ಒಟ್ಟು 105 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 51 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 48 ವಿದ್ಯಾರ್ಥಿಗಳು ಪ್ರಥಮ ದರ್ಜೆ, 15 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಹಾಗೆಯೇ ಶೇ. 95 ಕ್ಕಿಂತ ಹೆಚ್ಚು 9 ವಿದ್ಯಾರ್ಥಿಗಳು ಮತ್ತು ಶೇ. 90ಕ್ಕಿಂತ ಹೆಚ್ಚು 18 ವಿದ್ಯಾರ್ಥಿಗಳು ಅತ್ಯುತ್ತಮ ಅಂಕಗಳನ್ನು ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಸತ್ಯವತಿ ಎಸ್. (584) ಸ್ವಾಲಿಹಾ ಎಂ. (582) ಕವನ ಕೆ.ಜಿ. (579) ಮಂಜುನಾಥ್ ಎಂ.ಸಿ. (579) ಮಲ್ಲಿಕಾರ್ಜುನ್ ಜಿ.ಎಚ್. (577) ಮತ್ತು ವಾಣಿಜ್ಯ ವಿಭಾಗದಲ್ಲಿ ಕೆ.ಪಿ. ಚಂದನ (578), ಗೌಸಿಯಾ ಆರ್. (576) ಅತ್ಯುತ್ತಮ ಅಂಕಗಳನ್ನು ಪಡೆದಿದ್ದಾರೆ.

**ಆರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ :** ಸಂಸ್ಥೆ ವತಿಯಿಂದ ಪ್ರತಿ ವರ್ಷ ಶಾಲಾ ಮತ್ತು ಕಾಲೇಜಿನಲ್ಲಿ ಶೈಕ್ಷಣಿಕವಾಗಿ ಶೇ. 96ಕ್ಕಿಂತ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ 10 ಗ್ರಾಂ ಬಂಗಾರದ ಪದಕ ಮತ್ತು ಸ್ಮರಣಿಕೆ ನೀಡಿ ಗೌರವಿಸಲಾಗುವುದು.

ಪ್ರಸ್ತುತ 2023-24ನೇ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶದಲ್ಲಿ ವಿಜ್ಞಾನ ವಿಭಾಗದಿಂದ ಐದು ವಿದ್ಯಾರ್ಥಿಗಳು ಮತ್ತು ವಾಣಿಜ್ಯ ವಿಭಾಗದದಿಂದ ಒಬ್ಬ ವಿದ್ಯಾರ್ಥಿ ಒಟ್ಟು ಆರು ವಿದ್ಯಾರ್ಥಿಗಳು 10 ಗ್ರಾಂ ಬಂಗಾರದ ಪದಕ ಮತ್ತು ಸ್ಮರಣಿಕೆಗೆ ಭಾಜನರಾಗಿರುವುದನ್ನು ಕಂಡು ಸಂಸ್ಥೆಯ ಅಧ್ಯಕ್ಷರಾದ ಶಶಿಕಲಾ ಇ.ಆರ್, ಕಾರ್ಯದರ್ಶಿ ಡಾ. ಎಂ.ಇ. ರವಿರಾಜ ಮತ್ತು ಆಡಳಿತ ಮಂಡಳಿ ಸಿಬ್ಬಂದಿ ವರ್ಗದವರು ಸಂತಸ ವ್ಯಕ್ತಪಡಿಸಿದ್ದಾರೆ.

# ಚನ್ನಗಿರಿ ಕ್ಷೇತ್ರ ವ್ಯಾಪ್ತಿಯಲ್ಲಿ ಇಂದು ಡಾ. ಪ್ರಭಾ ಮಲ್ಲಿಕಾರ್ಜುನ್ ಪ್ರವಾಸ



ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಚನ್ನಗಿರಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಇಂದು ಪ್ರವಾಸ ಕೈಗೊಳ್ಳುವರು.

ಕೆಂಪನಹಳ್ಳಿ ಗ್ರಾಮದಿಂದ ಬೆಳಿಗ್ಗೆ 8-30 ಗಂಟೆಯಿಂದ ಪ್ರಚಾರ ಆರಂಭಿಸುವ ಅವರು ಕೋಗಲೂರು, ದೊಡ್ಡ ಮಲ್ಲಾಪುರ, ಕರೇಕಟ್ಟೆ, ಸೋಮಲಾಪುರ, ಕಾಕನೂರು, ನುಗ್ಗಿಹಳ್ಳಿ, ಚಿಕ್ಕಗಂಗೂರು, ಕೊರಟಿಕೆರೆ, ಹೆಬ್ಬಳಗೆರೆ, ಹೊದಿಗೆರೆ, ಗರಗ, ದೇವರಹಳ್ಳಿ, ಕಗತೂರು, ಬುಳಸಾಗರ, ಇಟ್ಟಿಗೆ, ಲಿಂಗದಹಳ್ಳಿ, ನಲ್ಲೂರು ಗ್ರಾಮಗಳಲ್ಲಿ ರಾತ್ರಿ 9 ರವರೆಗೆ ಮತಯಾಚನೆ ಮಾಡುವರು.

ಶಾಸಕ ಶಿವಗಂಗಾ ಬಸವರಾಜ್, ಮಾಜಿ ಶಾಸಕ ವಡ್ನಾಳ್ ರಾಜಣ್ಣ, ಹೊದಿಗೆರೆ ರಮೇಶ್ ಅವರು ಪ್ರಚಾರ ಕಾರ್ಯದಲ್ಲಿ ಭಾಗವಹಿಸುವರು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀನಿವಾಸ್ ಮತ್ತು ಜಬೀವುಲ್ಲಾ ತಿಳಿಸಿದ್ದಾರೆ.

# ಬಿಜೆಪಿ ಮುಖಂಡ ಎನ್.ಕೆ. ಇಸ್ಮಾಯಿಲ್ ಕಾಂಗ್ರೆಸ್‌ಗೆ



ದಾವಣಗೆರೆ, ಏ. 23 - ಬಿಜೆಪಿ ಮುಖಂಡ ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಎನ್.ಕೆ. ಇಸ್ಮಾಯಿಲ್ ಅವರು ತಮ್ಮ ಅಪಾರ ಬೆಂಬಲಿಗರೊಂದಿಗೆ ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಶಾಸಕ ಶಾಮನೂರು ಶಿವಶಂಕರಪ್ಪನವರ ಸಮ್ಮುಖದಲ್ಲಿ ಸೇರ್ಪಡೆಗೊಂಡ ಇಸ್ಮಾಯಿಲ್ ಅವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಪರವಾಗಿ ಪ್ರಚಾರ ಮಾಡುವುದಾಗಿ ತಿಳಿಸಿದರು. ಇಸ್ಮಾಯಿಲ್ ಅವರೊಂದಿಗೆ ತಂಜೀಂ ಸಮಿತಿಯ ಮಾಜಿ ಕಾರ್ಯದರ್ಶಿ ಶಹಬಾಜ್ ಖಾನ್, ಎನ್.ಕೆ.ಹಬೀಬುಲ್ಲಾ, ನಾಸೀರ್ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯ ಎ. ಬಿ. ರಹೀಂ ಹಾಗೂ ಮುಖಂಡರು ಉಪಸ್ಥಿತರಿದ್ದರು.

# ಹಳ್ಳಿಹಾಳ್ ಮಟ್ಟಿ ಕ್ಯಾಂಪ್ ಗ್ರಾಮಸ್ಥರಿಂದ ಚುನಾವಣೆ ಬಹಿಷ್ಕಾರದ ಅರ್ಜಿ

ಮಲೇಬೆನ್ನೂರು, ಏ.23- ಚುನಾವಣೆ ಬಹಿಷ್ಕಾರ ಮಾಡುವುದಾಗಿ ಹೇಳಿದ್ದ ಹಳ್ಳಿಹಾಳ್ ಮಟ್ಟಿ ಕ್ಯಾಂಪ್ ಗ್ರಾಮಸ್ಥರು ಮಂಗಳವಾರ ಅಧಿಕಾರಿಗಳ ಭರವಸೆಯ ಮೇರೆಗೆ ಮತದಾನ ಮಾಡುವ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಹಳ್ಳಿಹಾಳ್ ಮಟ್ಟಿ ಕ್ಯಾಂಪ್‌ನಿಂದ ಹಳ್ಳಿಹಾಳ್ ಗ್ರಾಮದವರೆಗಿನ ರಸ್ತೆ ದುರಸ್ತಿ ಮಾಡಿಸುವಂತೆ ಈ ಹಿಂದೆ ಜನಪ್ರತಿನಿಧಿಗಳಿಗೆ ಮತ್ತು ಡಿಸಿ, ತಹಶೀಲ್ದಾರ್ ಹಾಗೂ ಕೊಕ್ಕನೂರು ಗ್ರಾ.ಪಂ.ಗೆ 3-4 ಬಾರಿ ಮನವಿ ಮಾಡಿದ್ದೆವು.

ನಮ್ಮ ಮನವಿಗೆ ಯಾರೂ ಸ್ಪಂದಿಸದಿದ್ದಾಗ ನಾವು ಮೇ 7 ರಂದು ನಡೆಯುವ ಲೋಕಸಭಾ ಚುನಾವಣೆಯನ್ನು ಬಹಿಷ್ಕಾರ ಮಾಡಿ, ಮತದಾನದಿಂದ ದೂರ ಉಳಿಯುವುದಾಗಿ ಹರಿಹರ ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿದ್ದೆವು ಎಂದು ಹಳ್ಳಿಹಾಳ್ ಮಟ್ಟಿ ಕ್ಯಾಂಪ್ ಗ್ರಾಮಸ್ಥರು ಮಂಗಳವಾರ ನಡೆದ ಅಧಿಕಾರಿಗಳ



ವಿಚಾರಣೆ ಸಭೆಯಲ್ಲಿ ಹೇಳಿದರು.

ಈ ವೇಳೆ ಮಾತನಾಡಿದ ಜಿ.ಪಂ. ಎಇಇ ಗಿರೀಶ್ ಅವರು, ಹಳ್ಳಿಹಾಳ್ ಮಟ್ಟಿ ಕ್ಯಾಂಪ್‌ನಿಂದ ಹಳ್ಳಿಹಾಳ್‌ವರೆಗಿನ ರಸ್ತೆ ಅಭಿವೃದ್ಧಿ ಪಡಿಸುವ ಬಗ್ಗೆ 50 ಲಕ್ಷ ರೂ. ಅನುದಾನ ನೀಡುವಂತೆ ಯೋಜನೆ ಸಿದ್ದಪಡಿಸಿ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದೇವೆ. ಚುನಾವಣೆ ನಂತರ ಮಂಜೂರಾತಿ ಸಿಗುವ ವಿಶ್ವಾಸವಿದೆ ಎಂದು ಗಿರೀಶ್ ಹೇಳಿದರು.

ತಾ.ಪಂ. ಇಓ ರಾಮಕೃಷ್ಣಪ್ಪ ಮಾತನಾಡಿ, ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲೂ ರಸ್ತೆ ಅಭಿವೃದ್ಧಿ ಪಡಿಸುವ ಭರವಸೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಗುರುಬಸವರಾಜ್ ಮಾತನಾಡಿ, ಮತದಾನ ನಿಮ್ಮ ಹಕ್ಕು, ಮತದಾನ ಮಾಡಿ ನೀವು ನಿಮ್ಮ ಹಕ್ಕಗಳನ್ನು ಕೇಳಬೇಕು. ಆಗ ಜನಪ್ರತಿನಿಧಿಗಳು, ಅಧಿಕಾರಿಗಳು ನಿಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತಾರೆ ಎಂದು ಗ್ರಾಮಸ್ಥರಿಗೆ ಮತದಾನದ ಮಹತ್ವವನ್ನು ತಿಳಿಸಿದಾಗ ಮತದಾನ ಮಾಡಲು ಒಪ್ಪಿಗೆ ಸೂಚಿಸಿದರು. ನಂತರ ಗ್ರಾಮಸ್ಥರಿಗೆ ಮತದಾನದ ಬಗ್ಗೆ ಜಾಗೃತಿ ಮೂಡಿಸಿ, ಪ್ರತಿಜ್ಞಾ ವಿಧಿಯನ್ನು ಭೋದಿಸಲಾಯಿತು.

ಉಪತಹಶೀಲ್ದಾರ್ ಆರ್.ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಷರೀಫ್, ಕೊಕ್ಕನೂರು ಪಿಡಿಓ ನಾಗರಾಜ್ ಸೇರಿದಂತೆ ತಾ.ಪಂ. ಅಧಿಕಾರಿಗಳು ಸಭೆಯಲ್ಲಿದ್ದರು.

# ನಗರದಲ್ಲಿ ಇಂದು ಸೈಕ್ಲೋಥಾನ್ ಮತದಾನೋತ್ಸವ ಕಾರ್ಯಕ್ರಮ

ಜಿಲ್ಲಾಧಿಕಾರಿಗಳ ಕಚೇರಿ, ಜಿಲ್ಲಾ ಪಂಚಾಯತ್ ಹಾಗೂ ಸ್ಮಾರ್ಟ್ ಸಿಟಿ ಲಿಮಿಟೆಡ್ ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 7 ಗಂಟೆಗೆ ಲೋಕಸಭಾ ಚುನಾವಣೆ ಅಂಗವಾಗಿ ಅನುಭವ ಮಂಟಪದ ಮುಂಭಾಗದ ರಸ್ತೆಯಿಂದ ಜಿಲ್ಲಾ ಕ್ರೀಡಾಂಗಣದವರೆಗೆ ಸೈಕ್ಲೋಥಾನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಸ್ಮಾರ್ಟ್ ಸಿಟಿ ಎಂ.ಡಿ ವೀರೇಶ್ ತಿಳಿಸಿದ್ದಾರೆ.

# ನೇಹಾ ಹತ್ಯೆ ಖಂಡಿಸಿ ಹರಿಹರದಲ್ಲಿ ಹಿಂದೂ ಜಾಗರಣಾ ವೇದಿಕೆ ಪ್ರತಿಭಟನೆ



ಹರಿಹರ, ಏ.23- ಹುಬ್ಬಳ್ಳಿಯಲ್ಲಿ ನಡೆದ ನೇಹಾ ಹಿರೇಮಠ ಅವರ ಹತ್ಯೆ ಖಂಡಿಸಿ ನಗರದಲ್ಲಿ ಹಿಂದೂ ಜಾಗರಣ ವೇದಿಕೆಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಗುರು ಬಸವರಾಜ್ ಅವರಿಗೆ ಮನವಿ ಸಲ್ಲಿಸಿದರು.

ಮೆರವಣಿಗೆಯು ಮಾಜೇನಹಳ್ಳಿ ಶ್ರೀ ಗ್ರಾಮದೇವತೆ ದೇವಸ್ಥಾನದಿಂದ ಆರಂಭಗೊಂಡು ಶಿವಮೊಗ್ಗ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಹರಪನಹಳ್ಳಿ ವೃತ್ತದವರೆಗೆ ಪ್ರತಿಭಟನಾ ಜಾಥಾ ಹೊರಟು ನಂತರ ತಹಶೀಲ್ದಾರ್ ಕಚೇರಿ ತಲುಪಿತು.

ಈ ವೇಳೆ ಶಾಸಕ ಬಿ.ಪಿ. ಹರೀಶ್, ಹಿಂದೂ ಜಾಗರಣ ವೇದಿಕೆಯ ಪ್ರಾಂತ್ಯ ಸಂಘಟನಾ ಕಾರ್ಯದರ್ಶಿ ಸತೀಶ್ ಪೂಜಾರ್. ಎಚ್. ದಿನೇಶ್, ಟಿ. ಕಾರ್ತಿಕ್, ಚಂದ್ರಕಾಂತ್ ಗೌಡ, ಶಿವು, ಬಿಜೆಪಿ ಮುಖಂಡರಾದ ಹಲಸಬಾಳು ಶಿವಾನಂದಪ್ಪ, ಬಾತಿ ಚಂದ್ರಶೇಖರ್, ರಾಜು ರೋಖಡೆ, ಪರಶುರಾಮ ಕಾಟ್ವೆ, ಲಿಂಗರಾಜ್ ಹಿಂಡಸಗಟ್ಟ, ನಾಗರಾಜ್ ಭಂಡಾರೆ, ರೂಪ ಕಾಟ್ವೆ, ಅಂಬುಜಾ ಬಾಯಿ ರಾಜೋಳಿ, ಗುರುಬಸವರಾಜ್ ಮತ್ತು ಇತರರು ಭಾಗವಹಿಸಿದ್ದರು.


# ಶ್ರೀರಾಮನ ಅಸ್ತಿತ್ವ ಪ್ರಶ್ನಿಸಿದವರಿಗೆ ಮತ ನೀಡುವಿರಾ ?

## ಸಂತೆಮುದ್ದಾಪುರದಲ್ಲಿ ಹನುಮ ಮಾಲಾಧಾರಿಗಳ ಜೊತೆ ಮಾತುಕತೆ ನಡೆಸಿದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ

ಜಗಳೂರು, ಏ.23- ತಾಲ್ಲೂಕಿನ ಸಂತೆಮುದ್ದಾಪುರ ಗ್ರಾಮದಲ್ಲಿ ಆಯೋಜಿಸಿದ್ದ ದ್ವಿತೀಯ ವರ್ಷದ ಹನುಮ ಜಯಂತಿ ಮಹೋತ್ಸವದಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪಾಲ್ಗೊಂಡು ಸಂಜೀವಿನಿ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆದರು.

ದೇವರ ದರ್ಶನದ ಬಳಿಕ ಹನುಮ ಮಾಲಾಧಾರಿಗಳ ಜೊತೆ ಮಾತುಕತೆ ನಡೆಸಿದ ಗಾಯತ್ರಿ ಸಿದ್ದೇಶ್ವರ ಅವರು, ರಾಮ-ಹನುಮ ನಮಗೆ ಒಂದು ದಿವ್ಯ ಶಕ್ತಿ ಇದ್ದಂತೆ. ಎಲ್ಲಿ ರಾಮ ನೆಲೆಸಿರುವನೋ ಅಲ್ಲಿ ಹನುಮನೂ ಇರುತ್ತಾನೆ ಎಂದರು.

ವಾಲ್ಮೀಕಿ ಮಹರ್ಷಿಗಳು ಬರೆದ ರಾಮಾಯಣದಲ್ಲಿ ನಮಗೆ ಶ್ರೀರಾಮ ಮತ್ತು ಸೀತೆಯ ಜೊತೆ ರಾಮ ಭಂಟ ಹನುಮನೂ ಅಷ್ಟೇ ಪ್ರಾಮುಖ್ಯತೆ ಪಡೆದ್ದಾನೆ. ಶ್ರೀರಾಮನ ಸೇವೆಗಾಗಿ ಹನುಮಂತ ಮಾಡಿದ ಲೀಲೆಗಳು ಒಂದೆರಡಲ್ಲ. ಅಂತಹ ಶ್ರೀರಾಮನ ಅಸ್ತಿತ್ವವನ್ನು ಇಂದು ಕಾಂಗ್ರೆಸ್ಸಿಗರು ಪ್ರಶ್ನೆ ಮಾಡುತ್ತಿದ್ದಾರೆ. ಕೋಟ್ಯಂತರ ಭಾರತೀಯರ



ಆರಾಧ್ಯ ದೈವ ಶ್ರೀರಾಮಚಂದ್ರ ಕಾಲ್ಪನಿಕ ಎಂದು ಕಾಂಗ್ರೆಸ್ಸಿಗರು ಕೋರ್ಟ್ ಮೆಟ್ಟಿಲೇರಿದ್ದರು. ಅಂತಹ ಕಾಂಗ್ರೆಸ್ಸಿಗೆ ಚುನಾವಣೆ ಮೂಲಕ ನಾವು ನಮ್ಮ ಅಸ್ತಿತ್ವವನ್ನು ಸಾಬೀತುಪಡಿಸಬೇಕು ಎಂದು ಕರೆ ನೀಡಿದರು.

ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮಚಂದ್ರನ ಭವ್ಯ ಮಂದಿರ ನಿರ್ಮಾಣ ಮಾಡಲು 500 ವರ್ಷಗಳು ಬೇಕಾಯಿತು. ನೂರಾರು ಕರ ಸೇವಕರ ಪ್ರಾಣ ತ್ಯಾಗ, ಕೋಟ್ಯಂತರ ಭಾರತೀಯರ ಹೋರಾಟದ ಫಲ, ನರೇಂದ್ರ ಮೋದಿ ಅವರ ಇಚ್ಛಾಶಕ್ತಿಯಿಂದ ಇಂದು ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಾಣವಾಗಿದೆ. ಇದೇ ರಾಮಮಂದಿರ ನಿರ್ಮಾಣದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿದ್ದಾಗ ಇದರ ವಿರುದ್ಧವಾಗಿ ಕಾಂಗ್ರೆಸ್ ಪಕ್ಷ 24 ವಕೀಲರನ್ನು ನೇಮಿಸಿತ್ತು. ವಕೀಲರ ತಂಡದ ನೇತೃತ್ವ ವಹಿಸಿದ್ದ ಇದೇ ಕಾಂಗ್ರೆಸ್‌ನ ಕಪಿಲ್ ಸಿಬಾಲ್, ಶ್ರೀರಾಮಚಂದ್ರ ಕೇವಲ ಕಾಲ್ಪನಿಕ ವ್ಯಕ್ತಿ, ಶ್ರೀರಾಮ ಇದ್ದರು ಎನ್ನುವುದಕ್ಕೆ ಏನು ಪುರಾವೆ ಇದೆ ಎಂದು ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅಂದು ಶ್ರೀರಾಮಚಂದ್ರನ, ಕೋಟ್ಯಂತರ ಭಾರತೀಯರ ಅಸ್ತಿತ್ವವನ್ನು ಪ್ರಶ್ನಿಸಿದ ಕಾಂಗ್ರೆಸ್ ಇಂದು ಶ್ರೀರಾಮ ಮಂದಿರದ ಕ್ರೆಡಿಟ್ ಬಿಜೆಪಿ ತೆಗೆದುಕೊಳ್ಳುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಶ್ರೀರಾಮನ ಅಸ್ತಿತ್ವ ಪ್ರಶ್ನೆ ಮಾಡಿದವರಿಗೆ ಅದರ ಕ್ರೆಡಿಟ್ ಕೇಳುವ ನೈತಿಕತೆ ಇದೆಯೇ ? ನೀವು ಅಂತಹವರಿಗೆ ಮತ ಹಾಕುವಿರಾ ? ಎಂದು ಪ್ರಶ್ನಿಸಿದರು.

ಜಗಳೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ಎಸ್.ವಿ. ರಾಮಚಂದ್ರಪ್ಪ, ಎಚ್. ಪಿ.ರಾಜೇಶ್, ಬಿಜೆಪಿ ಯುವ ಮುಖಂಡರಾದ ಜಿ.ಎಸ್.ಅನಿತ್ ಕುಮಾರ್, ಪಲ್ಲಾಗಟ್ಟೆ ಮಹೇಶ್, ಜೆಡಿಎಸ್ ನಾಯಕ ಕಲ್ಲೇರುದ್ರೇಶ್, ಇಂದಿರಾ ರಾಮಚಂದ್ರ, ರೂಪ, ವಿಜಯಲಕ್ಷ್ಮಿ, ಬಿದರಕೆರೆ ರವಿ ಕುಮಾರ್, ರಶ್ಮಿ ರಾಜೇಶ್, ಸೊಕ್ಕೆ ನಾಗರಾಜ್, ಮಂಜುನಾಥ್, ಯರಬಳ್ಳಿ ಸಿದ್ದಣ್ಣ, ಲಿಂಗರಾಜ್ ಫಣಿಯಾಪುರ, ಚಟ್ನಿಹಳ್ಳಿ ಬಸವರಾಜ್, ಸೇರಿದಂತೆ ಗ್ರಾಮಸ್ಥರು, ಹನುಮ ಮಾಲಾಧಾರಿಗಳು ಇದ್ದರು.

# ಸಿನಿಮಾ-ಧಾರಾವಾಹಿಗಳಲ್ಲಿ ಬಾಲನಟ, ನಟಿ ಪಾತ್ರಕ್ಕಾಗಿ ಮಕ್ಕಳ ಬಳಕೆ ನಿಷೇಧ

ದಾವಣಗೆರೆ, ಏ.23 - ಬಾಲ ನಟರು ಹಾಗೂ ಬಾಲ ನಟಿಯರ ಪಾತ್ರಕ್ಕಾಗಿ ಮಕ್ಕಳನ್ನು ಬಳಸಿಕೊಳ್ಳಲು ಇಚ್ಛಿಸುವ ಸಿನಿಮಾ ಅಥವಾ ಧಾರಾವಾಹಿ ನಿರ್ದೇಶಕರು, ನಿರ್ಮಾಪಕರು, ಇಲ್ಲವೇ ಆಯೋಜಕರು ಜಿಲ್ಲಾಧಿಕಾರಿಗಳ ಅನುಮತಿ ಪತ್ರ ಪಡೆಯುವುದು ಕಡ್ಡಾಯವಾಗಿದೆ.

ಮಕ್ಕಳ ಶಿಕ್ಷಣದ ಹಕ್ಕಿಗೆ ಮಾರಕವಾಗದಂತೆ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಹಾಗೂ ಬಾಲ ಕಿಶೋರ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆ 1896ರ ಕರ್ನಾಟಕ ನಿಯಮಗಳು 2ಸಿ ರಲ್ಲಿ ಒಬ್ಬ ಕಲಾವಿದನಾಗಿ ಬಾಲ ನಟ, ನಟಿಯಾಗಿ ಕೆಲಸವನ್ನು ಒಂದು ದಿನದಲ್ಲಿ 5 ಗಂಟೆಗಳಿಗಿಂತ ಮತ್ತು ವಿಶ್ರಾಂತಿ ಇಲ್ಲದೆ 3 ಗಂಟೆಗಳಿಗಿಂತ ಹೆಚ್ಚು ಕೆಲಸ ಮಾಡಿಸುವಂತಿಲ್ಲ.

ಮಕ್ಕಳನ್ನು ಬಳಸಿ ಸಂಪೂರ್ಣ ಚಿತ್ರೀಕರಣ ಮಾಡುವ ಸಂದರ್ಭದಲ್ಲಿ ಮಕ್ಕಳ ದುರುಪಯೋಗ ಪ್ರಕರಣ, ನಿರ್ಲಕ್ಷ್ಯ, ಶೋಷಣೆ ನಡೆಯದಂತೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಮಕ್ಕಳು ನಿರಂತರವಾಗಿ 27 ದಿನಗಳಿಗಿಂತ ಹೆಚ್ಚಿನ ದಿನಗಳು ನಟನಾ ಕೆಲಸದಲ್ಲಿ ತೊಡಗಲು ಅವಕಾಶ ನೀಡಬಾರದು. ಪ್ರತಿ 5 ಮಕ್ಕಳಿಗೆ ಒಬ್ಬರಂತೆ ಜವಾಬ್ದಾರಿ ವ್ಯಕ್ತಿಯನ್ನು ನೇಮಿಸುವುದು. ಮಕ್ಕಳ ನಟನಾ ಕೆಲಸದ ಚಟುವಟಿಕೆ ನಟನೆಗೆ ಭಾಗವಹಿಸುವ ಮಕ್ಕಳ ಪೋಷಕರ, ಪಾಲಕರ ಒಪ್ಪಿಗೆ ಪತ್ರವನ್ನು ಪಡೆದು ಸಿನಿಮಾ ಅಥವಾ ಧಾರಾವಾಹಿ ನಿರ್ದೇಶಕರು, ನಿರ್ಮಾಪಕರು, ಇಲ್ಲವೇ ಆಯೋಜಕರು ಕಡ್ಡಾಯವಾಗಿ ಪ್ರದೇಶ ಕಾರ್ಯವ್ಯಾಪ್ತಿಯ ಜಿಲ್ಲಾ ದಂಡಾಧಿಕಾರಿಗಳ ಪೂರ್ವಾನುಮತಿಯೊಂ ದಿಗೆ ಮುಚ್ಚಳಿಕೆ ಪತ್ರವನ್ನು ಮತ್ತು ನಮೂನೆ 'ಸಿ' ಯಲ್ಲಿ ಜಿಲ್ಲಾ ದಂಡಾಧಿಕಾರಿಗಳಿಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಅಧ್ಯಕ್ಷರಾದ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

# ನಗರದಲ್ಲಿ ಮತದಾನ ಜಾಗೃತಿ ಇಂದು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ ಇಂದು ಬೆಳಿಗ್ಗೆ 10 ಗಂಟೆಗೆ ವಿಶ್ವೇಶ್ವರಯ್ಯ ಪಾರ್ಕ್‌ನಲ್ಲಿ ಮತದಾನ ಜಾಗೃತಿ ಅಂಗವಾಗಿ ಚಿತ್ರಕಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಜಿ.ಪಂ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ ತಿಳಿಸಿದ್ದಾರೆ.

# ಬಸ್‌ಗಳಿಗೆ ಮತದಾರರ ಜಾಗೃತಿ ಸ್ಟಿಕ್ಕರ್ ಅಳವಡಿಕೆಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ



ದಾವಣಗೆರೆ.ಏ.23- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ರಾಜ್ಯ ಸಾರಿಗೆ ಸಂಪರ್ಕ ನಿಗಮ ಇವರ ಸಹಯೋಗದಲ್ಲಿ ನಗರದ ಹೈಸ್ಕೂಲ್ ಮೈದಾನದಲ್ಲಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಬಸ್‌ಗಳಿಗೆ ಮತದಾನ ಜಾಗೃತಿ ಸ್ಟಿಕ್ಕರ್ ಅಳವಡಿಸುವ ಮೂಲಕ ಮತದಾನ ಜಾಗೃತಿಗೆ ಚಾಲನೆ ನೀಡಲಾಯಿತು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಅವರು 'ಪ್ರಜಾಪ್ರಭುತ್ವ ನಮ್ಮಿಂದ, ಮತದಾನ ಹೆಮ್ಮೆಯಿಂದ, ಚುನಾವಣಾ ಪರ್ವ ದೇಶದ ಗರ್ವ' ಎಂಬ ಶೀರ್ಷಿಕೆಯ ಸ್ಟಿಕ್ಕರನ್ನು ಅನಾವರಣಗೊಳಿಸಿ ಮೇ 7 ರಂದು ಎಲ್ಲರೂ ತಪ್ಪದೇ ಮತಗಟ್ಟೆಗೆ ಬಂದು ಮತದಾನ ಮಾಡಿ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಕೆ.ಎಸ್.ಆರ್.ಟಿ.ಸಿ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ಸಿ.ಇ. ಶ್ರೀನಿವಾಸ್ ಮೂರ್ತಿ, ವಿಭಾಗೀಯ ತಾಂತ್ರಿಕ ಅಭಿಯಂತರ ವೆಂಕಟೇಶ್, ವಿಭಾಗೀಯ ಸಂಚಲನಾಧಿಕಾರಿ ಫಕೃದ್ದೀನ್, ಆಡಳಿತಾಧಿಕಾರಿ ರಾಜಶೇಖರ್ ಕಂಬಾರ, ವ್ಯವಸ್ಥಾಪಕ ಎಂ. ರಾಮಚಂದ್ರಪ್ಪ, ಲೆಕ್ಕಾಧಿಕಾರಿ ಚೆಲುವೇಗೌಡ, ನಗರ ಸಾರಿಗೆ ಘಟಕದ ವ್ಯವಸ್ಥಾಪಕ ಮರುಳುಸಿದ್ದಪ್ಪ, ನಿಲ್ದಾಣಾಧಿಕಾರಿ ಸಿದ್ದೇಶ್ ಹಾಗೂ ಇನ್ನಿತರೆ ಸಿಬ್ಬಂದಿಗಳು ಭಾಗವಹಿಸಿದ್ದರು.

# ಗೋವಾ ಸಂವಿಧಾನ ಹೇರಿಕೆ ಹೇಳಿಕೆಗೆ ಮೋದಿ ತರಾಟೆ

## ಧರ್ಮದ ಹೆಸರಿನಲ್ಲಿ ದೇಶ ಒಡೆಯುತ್ತಿರುವ ಕಾಂಗ್ರೆಸ್

ಸಕ್ತಿ (ಛತ್ತೀಸ್‌ಘಡ), ಏ. 23 – ಗೋವಾದ ಮೇಲೆ ಸಂವಿಧಾನ ಹೇರಿಕೆ ಮಾಡಲಾಗಿತ್ತು ಎಂದು ಅಲ್ಲಿನ ಕಾಂಗ್ರೆಸ್ ಅಭ್ಯರ್ಥಿ ಹೇಳಿರುವುದನ್ನು ತರಾಟೆಗೆ ತೆಗೆದುಕೊಂಡಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಇದು ದೇಶವನ್ನು ಒಡೆಯುವ ಕುತಂತ್ರ ಎಂದು ಆರೋಪಿಸಿದ್ದಾರೆ.

ಛತ್ತೀಸ್‌ಘಡದ ಸಕ್ತಿ ಜಿಲ್ಲೆಯಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ, ಕಾಂಗ್ರೆಸ್ ಪಕ್ಷ ಧರ್ಮದ ಹೆಸರಿನಲ್ಲಿ ದೇಶವನ್ನು ಒಡೆಯುತ್ತಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತ ದಿನದಿಂದಲೂ ಓಲೈಕೆಯಲ್ಲಿ ನಿರತವಾಗಿದೆ ಎಂದು ಆರೋಪಿಸಿದರು.

ದಲಿತರು, ಆದಿವಾಸಿಗಳು ಹಾಗೂ ಹಿಂದುಳಿದ ವರ್ಗಗಳವರು ಅಧಿಕಾರದಲ್ಲಿರುವುದನ್ನು ಕಾಂಗ್ರೆಸ್‌ಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ಈಗ ಪಕ್ಷ ದೊಡ್ಡ ಆಟ ಆರಂಭಿಸಿದೆ. ಈ ಹಿಂದೆ ಕರ್ನಾಟಕದ ಕಾಂಗ್ರೆಸ್ ಸಂಸದರೊಬ್ಬರು ದಕ್ಷಿಣ ಭಾರತ ಪ್ರತ್ಯೇಕ ದೇಶವಾಗಬೇಕು ಎಂದು ಹೇಳಿದ್ದರು. ಈಗ ಗೋವಾದ ಕಾಂಗ್ರೆಸ್ ಅಭ್ಯರ್ಥಿ ಭಾರತದ ಸಂವಿಧಾನ ಗೋವಾಗೆ ಅನ್ವಯವಾಗುವುದಿಲ್ಲ ಎಂದಿದ್ದಾರೆ. ಗೋವಾದ ಮೇಲೆ ಸಂವಿಧಾನ ಹೇರಿಕೆ ಮಾಡಲಾಗಿದೆ ಎಂದವರು ಹೇಳಿದ್ದಾರೆ.

ಈ ವಿಷಯವನ್ನು ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಳಿ ಹೇಳಿದ್ದಾರೆ. ಇದು ಭಾರತದ ಸಂವಿಧಾನಕ್ಕೆ ಮಾಡಿದ ಅವಮಾನವಲ್ಲವೇ? ಇದು ಭಾರತದ ಸಂವಿಧಾನವನ್ನು ತಿರುಚಿದಂತೆ ಅಲ್ಲವೇ? ಎಂದು ಮೋದಿ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷ ದೇಶವನ್ನು ಒಡೆಯಲು ಸಂಚು ನಡೆಸಿದೆ. ದೇಶದ ದೊಡ್ಡ ಭಾಗ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದೆ. ಹೀಗಾಗಿ ಅವರು ಸಣ್ಣ ದ್ವೀಪಗಳನ್ನು ಸೃಷ್ಟಿಸಲು ಬಯಸಿದ್ದಾರೆ ಎಂದೂ ಮೋದಿ ಆರೋಪಿಸಿದರು.

ದಕ್ಷಿಣ ಗೋವಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ವಿರಿಯಾಟೋ ಫರ್ನಾಂಡೀಸ್ ಅವರು ಸೋಮವಾರ ಹೇಳಿಕೆ ನೀಡಿ, ಗೋವಾದ ಭವಿಷ್ಯವನ್ನು ಅಲ್ಲಿನ ಜನರೇ ನಿರ್ಧರಿಸಲಿದ್ದಾರೆ ಎಂದು ಆಗಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರು ಅವರು ಹೇಳಿದ್ದರು. ಆದರೆ, ಆ ರೀತಿ ಆಗಲಿಲ್ಲ. ಭಾರತದ ಸಂವಿಧಾನವನ್ನು ರಾಜ್ಯದ ಮೇಲೆ ಹೇರಲಾಗಿತ್ತು ಎಂದಿದ್ದರು.

# ವಾಗೀಶ್ ಸ್ವಾಮಿ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ ಬಿಜೆಪಿ ಮುಖಂಡರು



ದಾವಣಗೆರೆ, ಏ.23- ಕಾಂಗ್ರೆಸ್ ಪಕ್ಷದ ಮುಖಂಡ ವಾಗೀಶಸ್ವಾಮಿ ಅವರ ನೇತೃತ್ವದಲ್ಲಿ ಬಿಜೆಪಿಯ ಮುಖಂಡರು ಹಾಗೂ ಕಾರ್ಯಕರ್ತರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಆಲೂರು ಚನ್ನಬಸಪ್ಪ, ಆಲೂರು ಪ್ರಕಾಶ್, ನಿವೃತ್ತ ಶಿಕ್ಷಕ ಬಿ.ಜಿ ಸಿದ್ದನಗೌಡರ್, ಟಿ.ಎಂ ವೀರೇಶ ಸ್ವಾಮಿ, ಡಿ.ಬಿ. ಕಿರಣ್ ಕುಮಾರ್, ಯತೀಶ್ ಸ್ವಾಮಿ, ಕೆ.ಎಸ್ ಶಿವಣ್ಣ, ಪಲ್ಲಿ ಪರಶುರಾಮಪ್ಪ, ಅಡಿವೆಪ್ಪರ ಸಿದ್ದಪ್ಪ, ತಾ.ಪಂ ಸದಸ್ಯ ಡಿ. ಶಿವಕುಮಾರ, ಕಾಶೀಪುರ ಕರಿಬಸಪ್ಪ, ಹೊಳೆಸಿರಿಗೆರೆಯ ಮಲ್ಲೇಶಪ್ಪ, ದೇವೇಂದ್ರಪ್ಪ ಸೇರಿದಂತೆ ಇತರರು ಬಿಜೆಪಿ ಪಕ್ಷ ತೊರೆದು ಕಾಂಗ್ರೆಸ್‌ಗೆ ಬೆಂಬಲ ಸೂಚಿಸಿದರು.

# ಗೋವಾ ಸಂವಿಧಾನ ಹೇರಿಕೆ : ಕಾಂಗ್ರೆಸ್ ಅಭ್ಯರ್ಥಿ ಸಮರ್ಥನೆ, ಬಿಜೆಪಿ ದೂರು

ಪಣಜಿ, ಏ. 23 – ಗೋವಾ ಮೇಲೆ ಸಂವಿಧಾನ ಹೇರಲಾಗಿತ್ತು ಎಂದು ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ವಿರಿಯಾಟೋ ಫರ್ನಾಂಡೀಸ್ ನೀಡಿರುವ ಹೇಳಿಕೆಯ ವಿರುದ್ಧ ಬಿಜೆಪಿ ಚುನಾವಣಾ ಆಯೋಗದ ಬಳಿ ದೂರು ದಾಖಲಿಸಿದೆ. ಈ ನಡುವೆ ತಮ್ಮ ಹೇಳಿಕೆಯನ್ನು ಸಮರ್ಥಿಸಿ ಕೊಂಡಿರುವ ಫರ್ನಾಂಡೀಸ್, ಗೋವಾದಲ್ಲಿ ಬಿಜೆಪಿ ಆಡಳಿತದಲ್ಲಿ ನಡೆದಿರುವ ರಾಜ್ಯದ ಅಸ್ಮಿತೆಯ ನಾಶ, ನಿರುದ್ಯೋಗ, ಹಣ ದುಬ್ಬರ ಅಪರಾಧ ಹಾಗೂ ಭ್ರಷ್ಟಾಚಾರದ ಬಗ್ಗೆ ಚರ್ಚಿಸಲು ಸಿದ್ಧ ಎಂದಿದ್ದಾರೆ. ತಮ್ಮ ಹೇಳಿಕೆಗಳನ್ನು ರಾಜಕೀಯ ಲಾಭಕ್ಕಾಗಿ ತಿರುಚಬಾರದು ಎಂದೂ ಫರ್ನಾಂಡೀಸ್ ಹೇಳಿ ದ್ದಾರೆ. ಫರ್ನಾಂಡೀಸ್ ಹೇಳಿಕೆಯನ್ನು ಸಮರ್ಥಿಸಿ ಕೊಂಡಿರುವ ಗೋವಾ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಯುರಿ ಅಲೆಮಾವೋ, ಸಂವಿಧಾನದ ಬಗ್ಗೆ ಮಾತನಾಡಲು ಬಿಜೆಪಿಗೆ ಹಕ್ಕಿಲ್ಲ ಎಂದಿದ್ದಾರೆ.

ಈ ನಡುವೆ, ಫರ್ನಾಂಡೀಸ್ ಹೇಳಿಕೆಯ ವಿರುದ್ಧ ಚುನಾವಣಾ ಆಯೋಗದ ಬಳಿ ಗೋವಾ ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದ್ ತನವಾಡೆ ಅವರು ದೂರು ದಾಖಲಿಸಿದ್ದಾರೆ.

# ಲವ್ ಜಿಹಾದ್ ಹತ್ತಿಕ್ಕಲು ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಿ

## ಹೊನ್ನಾಳಿಯಲ್ಲಿ ಸ್ವಾಮಿ ವಿವೇಕಾನಂದ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಪ್ರತಿಭಟನೆ



ಹೊನ್ನಾಳಿ, ಏ.23- ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾ ಹಿರೇಮಠ್ ಹತ್ಯೆಯನ್ನು ಖಂಡಿಸಿ ಪಟ್ಟಣದ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಸ್ವಾಮಿ ವಿವೇಕಾನಂದ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್, ಹಿಂದೂ ಜಾಗರಣ ವೇದಿಕೆ ಮತ್ತು ತಾಲ್ಲೂಕು ಬಿಜೆಪಿ ಮುಖಂಡರ ವತಿಯಿಂದ ಪ್ರತಿಭಟನೆ ನಡೆಯಿತು.

ಎಲ್ಲಾ ಕಾರ್ಯಕರ್ತರು ವಿದ್ಯಾರ್ಥಿನಿ ನೇಹಾ ಹಿರೇಮಠ್ ಅವರಿಗೆ ಮೌನಾಚರನೆ ಸಲ್ಲಿಸಿ, ಬೃಹತ್ ಮೆರವಣಿಗೆ ಮೂಲಕ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಬಿಜೆಪಿಯ ಹಿರಿಯ ಮುಖಂಡ ಶಾಂತರಾಜ್ ಪಾಟೀಲ್ ಮಾತನಾಡಿ, ಸರ್ಕಾರವು ಫಯಾಜ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಜತೆಗೆ ಲವ್ ಜಿಹಾದ್ ಪ್ರಕರಣಗಳನ್ನು ಹತ್ತಿಕ್ಕಲು ಕೊಲೆ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಎಂ.ಆರ್. ಮಹೇಶ್ ಮಾತನಾಡಿ, ಕಾಂಗ್ರೆಸ್‌ನ ಎನ್‌ಎಸ್‌ಯುಐ ವಿದ್ಯಾರ್ಥಿ ಸಂಘಟನೆ ನೇಹಾ ಹತ್ಯೆ ಖಂಡಿಸಿ, ಯಾಕೆ ಪ್ರತಿಭಟನೆ ಮಾಡಿಲ್ಲ ಎಂದು ಪ್ರಶ್ನಿಸಿದರು.

ಹಿಂದೂ ಜಾಗರಣ ವೇದಿಕೆಯ ಪ್ರಾಂತ್ಯ ಸಂಚಾಲಕ ಸತೀಶ್ ಪೂಜಾರಿ ಮಾತನಾಡಿ, ವಿಧಾನ ಸೌಧದಲ್ಲಿ ಪಾಕಿಸ್ತಾನ್ ಪರ ಘೋಷನೆ, ಹಿಂದೂ ಯುವಕರ ಮೇಲೆ ನಿರಂತರ ಹಲ್ಲೆ, ಇಂತಹ ಪ್ರಕರಣದ ಆರೋಪಿಗಳ ಬಗ್ಗೆ ರಾಜ್ಯ ಸರ್ಕಾರ ಮೃದುಧೋರಣೆ ತೋರದೆ ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಆರೋಪಿ ಫಯಾಜ್ ವಿರುದ್ಧ ಘೋಷಣೆ ಕೂಗಿದರು.

ಭಾರತೀಯ ಕಿಸಾನ್ ಸಂಘದ ಪ್ರಾಂತ ಸಂಚಾಲಕ ಪ್ರವೀಣ್ ರಾಂಪುರ, ಅರಕೆರೆ ಹನುಮಂತಪ್ಪ, ಕೆ.ವಿ.ಚನ್ನಪ್ಪ, ರವಿ, ದೇವರಾಜ್, ನಾಗರಾಜ್, ಚನ್ನೇಶ್, ನಟರಾಜ್, ಅಜಯ್‌ರೆಡ್ಡಿ, ಪ್ರಭು, ಅರುಣ್‌ಕುಮಾರ್, ಭರತ್ ಮತ್ತು ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಕಾರ್ಯಕರ್ತರು ಇದ್ದರು.

# ಕೃಷಿ ಪದವಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ

## ಪದವಿ ಜಾಗೃತಿ ಶಿಬಿರದಲ್ಲಿ ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ಪ್ರದೀಪ್ ಪಾಟೀಲ್



ದಾವಣಗೆರೆ, ಏ.23- ಪ್ರಸ್ತುತ ವೃತ್ತಿಪರ ಪದವಿಗಳಲ್ಲಿ ಕೃಷಿಗೆ ಸಂಬಂಧಿಸಿದ ಪದವಿಗೆ ಹೆಚ್ಚಿನ ಪ್ರಾಮುಖ್ಯತೆ ಸಿಗುತ್ತಿದೆ ಎಂದು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ಪ್ರದೀಪ್ ಪಾಟೀಲ್ ಹೇಳಿದರು.

ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಇತ್ತಿಚೇಗೆ ನಡೆದ ಕೃಷಿಗೆ ಸಂಬಂಧಿಸಿದ ಪದವಿ ಜಾಗೃತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಪದವಿ ಪಡೆದ ವ್ಯಕ್ತಿಗಳು ಹಲವಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತದಲ್ಲಿ ಕೃಷಿಯ ಸಮಗ್ರ ಬೆಳೆವಣಿಗೆಗೆ ಇವರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.

ತೋಟಗಾರಿಕೆ ವಿಜ್ಞಾನಿ ಎಂ.ಜಿ ಬಸವನಗೌಡ ಪ್ರಾಸ್ತಾವಿಕ ಮಾತನಾಡಿ, ಕೃಷಿ ಸಂಬಂಧಿಸಿದ ರಾಜ್ಯದ ಆರು ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಲು ರೈತರ ಮಕ್ಕಳಿಗೆ ಶೇ.50ರಷ್ಟು ಮೀಸಲಾತಿ ಇದ್ದು, ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ರೈತರ ಮಕ್ಕಳಿಗೆ ಸಲಹೆ ನೀಡಿದರು.

ನಮ್ಮ ಕೇಂದ್ರದಲ್ಲಿ ಕಳೆದ ಹತ್ತು ವರ್ಷಗಳಲ್ಲಿ 287ಕ್ಕೂ ಅಧಿಕ ವಿದ್ಯಾರ್ಥಿಗಳು ಪಶು ವೈದ್ಯಕೀಯ, ಕೃಷಿ, ತೋಟಗಾರಿಕೆ, ಅರಣ್ಯಶಾಸ್ತ್ರ, ಮೀನುಗಾರಿಕೆ, ಗೃಹ ವಿಜ್ಞಾನ ಪದವಿ ಪಡೆದಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ವಿಭಾಗದ ಮುಖ್ಯಸ್ಥ ಡಾ. ಟಿ.ಎನ್. ದೇವರಾಜ್ ಮಾತನಾಡಿ, ಆತ್ಮಸ್ಥೈರ್ಯ ಮತ್ತು ನಂಬಿಕೆಯಿಂದ ವಿದ್ಯಾಭ್ಯಾಸ ಮಾಡಿದರೆ ಅವಕಾಶಗಳು ಹುಡುಕಿಕೊಂಡು ಬರುತ್ತವೆ ಎಂದು ತಿಳಿಸಿದರು.

ವಿಜ್ಞಾನಿಗಳಾದ ಜೆ. ರಘುರಾಜ, ಎಚ್. ಎಂ. ಸಣ್ಣಗೌಡ್ರ, ಡಾ.ಜಿ.ಕೆ. ಜಯದೇವಪ್ಪ, ಡಾ. ಸುಪ್ರಿಯಾ ಪಿ. ಪಾಟೀಲ್ ಹಾಗೂ ಸಿಬ್ಬಂದಿ ಇದ್ದರು.


ಹೃದಯಪೂರ್ವಕ ಕೃತಜ್ಞತೆಗಳು

ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಕಾರ್ಯದರ್ಶಿಗಳಾದ ನಗರದ

**ದಸ್ತಗೀರ್ ಎಸ್. ಅಸಾದುಲ್ಲಾ**

ಇವರನ್ನು ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣಾ ಸಂಯೋಜಕರನ್ನಾಗಿ ನಿಯೋಜಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷರಾದ **ಜೆ.ಸಿ. ಚಂದ್ರಶೇಖರ್** ಹಾಗೂ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಅಧ್ಯಕ್ಷರಾದ **ಶ್ರೀ ಕೆ. ಪುಟ್ಟಸ್ವಾಮಿ ಗೌಡ್ರು** ಇವರುಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಶುಭ ಕೋರುವವರು

**ಶ್ರೀ ಶಹನವಾಜ್ ಚಿಟ್ಟೆವಾಲೆ**

ಹಾಗೂ

**ಎಂ.ಎ. ಅಕ್ಬರ್**



**ಸುಶ್ರುತ ಆಯುರ್ವೇದ ಆಸ್ಪತ್ರೆ & ಕಾಲೇಜ್**

ಇಂಡಸ್ಟ್ರೀಯಲ್ ಏರಿಯಾ, ಲೋಕಿಕೆರೆ ರಸ್ತೆ, ಶಶಿ ಸೋಪ್ ಫ್ಯಾಕ್ಟರಿ ಹತ್ತಿರ, ದಾವಣಗೆರೆ.

**ಬೇಕಾಗಿದ್ದಾರೆ**

| ಕ್ರ.ಸಂ. | ಉದ್ಯೋಗ | ವಿದ್ಯಾರ್ಹತೆ | ಸಂಖ್ಯೆ |
|---|---|---|---|
| 01 | ಕಂಪ್ಯೂಟರ್ ಆಪರೇಟರ್ ಮತ್ತು ಆಫೀಸ್ ಅಸಿಸ್ಟೆಂಟ್ | ಪದವಿ ಜೊತೆಗೆ ಕಂಪ್ಯೂಟರ್ (ಡಿಟಿಪಿ, ಟ್ಯಾಲಿ ಇತ್ಯಾದಿ) | 02 |
| 02 | ಅಕೌಂಟೆಂಟ್ | ಪದವಿ ಜೊತೆಗೆ 5 ವರ್ಷ ಕೆಲಸದ ಅನುಭವ, ನಿವೃತ್ತ ಬ್ಯಾಂಕ್ ಉದ್ಯೋಗಿ | 02 |
| 03 | ಆಫೀಸ್ ಅಟೆಂಡರ್ | ಪಿಯುಸಿ ಅಥವಾ ಎಸ್‌ಎಸ್‌ಎಲ್‌ಸಿ | 02 |
| 04 | ಸ್ಟಾಫ್ ನರ್ಸ್ | ಎಎನ್‌ಎಂ ಅಥವಾ ಜಿಎನ್‌ಎಂ | 02 |
| 05 | ವಾಚ್‌ಮನ್ | ಪಿಯುಸಿ ಅಥವಾ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ :ಪಿಯುಸಿ ಅಥವಾ ಎಸ್‌ಎಸ್‌ಎಲ್‌ಸಿ | 02 |
| 06 | ಗಾರ್ಡನರ್ | ತೋಟದ ಅಥವಾ ಉದ್ಯಾನವನದಲ್ಲಿ ಕೆಲಸ ಮಾಡಿದ ಅನುಭವ | 02 |

ಆಯ್ಕೆ ಬಯಸುವ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ ಮತ್ತು ಉದ್ಯೋಗಾನುಭವದ ಮಾಹಿತಿಯೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಖುದ್ದಾಗಿ ಭೇಟಿ ನೀಡಿ ಅಥವಾ ಈ ಕೆಳಗೆ ಇರುವ ಈ ಮೇಲ್ ವಿಳಾಸಕ್ಕೆ ಮಾಹಿತಿಯನ್ನು ಸಲ್ಲಿಸಬಹುದು.

ಈ ಮೇಲ್ ವಿಳಾಸ : jobssap24@gmail.com

ಮೊ. : 97403 80466

# ನಿಟ್ಟೂರಿನಲ್ಲಿ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ



ಮಲೇಬೆನ್ನೂರು, ಏ. 23- ನಿಟ್ಟೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಮಂಗಳವಾರ ಬೆಳಗ್ಗೆ ಅಪಾರ ಭಕ್ತ ಸಮೂಹದ ನಡುವೆ ವೈಭವದಿಂದ ಜರುಗಿತು.

ರಥದಲ್ಲಿ ಶ್ರೀ ಆಂಜನೇಯ ಸ್ವಾಮಿ ಮೂರ್ತಿ ಇಟ್ಟು ಪೂಜೆ ಸಲ್ಲಿಸಿದ ಬಳಿಕ ತೇರಿನ ಗಾಲಿಗೆ ಕಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

**ಮುಳ್ಳೋತ್ಸವ :** ರಥೋತ್ಸವ ಪ್ರಯುಕ್ತ ಆಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ಮಂಗಳವಾರ ಸಂಜೆ ಮುಳ್ಳೋತ್ಸವ ಶ್ರದ್ಧಾ ಭಕ್ತಿಯಿಂದ ನಡೆಯಿತು. ಮುಳ್ಳೋತ್ಸವದ ಬಳಿಕ ತಾಳ ವಾದ್ಯಗಳೊಂದಿಗೆ ದೇವರುಗಳ ಮೆರವಣಿಗೆ ನಡೆಸಲಾಯಿತು. ಮುಳ್ಳಿನ ರಾಶಿಯ ಬಳಿ ಗ್ರಾಮದ ಎಲ್ಲಾ ದೇವರುಗಳನ್ನು ತಾಳ ವಾದ್ಯಗಳೊಂದಿಗೆ ಕರೆ ತಂದು ಮುಳ್ಳಿನ ರಾಶಿಗೆ ಪೂಜೆ ಸಲ್ಲಿಸಿದ ಬಳಿಕ ಹರಕೆ ಹೊತ್ತ ಸಾವಿರಾರು ಭಕ್ತರು ಭಾವಪರವಶರಾಗಿ ಮುಳ್ಳಿನ ರಾಶಿಯ ಮೇಲೆ ನಡೆದರು.

**ಮಣೇವು :** ರಾತ್ರಿ ದೇವಾಲಯದ ಆವರಣದಲ್ಲಿ ನಡೆದ ಮಣೇವು ಕಾರ್ಯಕ್ರಮ ಅದ್ಭುತವಾಗಿತ್ತು. ಭಕ್ತರು ತಮ್ಮ ಮನೆಗಳಿಂದ ಬೆಲ್ಲ, ಈರುಳ್ಳಿಗಳನ್ನು ತಂದು ಮಣೇವು ನಡೆಯುವ ಸ್ಥಳದಲ್ಲಿ ಹಾಕಿದ್ದರು. ಬೆಲ್ಲ ಮತ್ತು ಈರುಳ್ಳಿಗಳನ್ನು ಕತ್ತರಿಸಿ ದೇವತೆ ವಿಗ್ರಹಗಳ ಮುಂದೆ ನೆಲದ ಮೇಲೆ ಅಲ್ಲಲ್ಲಿ ರಾಶಿ ಹಾಕಿದ್ದರು. ಭೂತ ಪ್ರವೇಶ ಮಾಡಿದವರು ಕೈಯ್ಯಲ್ಲಿ ಭೂತದ ಹಲಗೆ ಹಿಡಿದು ಡೊಳ್ಳು ಹಾಗೂ ಹಲಗೆಯ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿದರು. ದೇವರು ಮೈಮೇಲೆ ಬಂದ ಕೆಲವರು ಜೋರಾಗಿ ಆರ್ಭಟಿಸುತ್ತಾ ವೃತ್ತಾಕಾರದಲ್ಲಿ ಸುತ್ತಾಡುತ್ತಿರುವ ದೃಶ್ಯ ಅದ್ಭುತವಾಗಿತ್ತು. ಬಳಿಕ ಸುತ್ತುವರಿದ ಭೂತಪ್ಪಗಳು ನೆಲದ ಮೇಲೆ ಹಾಕಿದ್ದ ಈರುಳ್ಳಿ ಮತ್ತು ಬೆಲ್ಲದ ರಾಶಿಯನ್ನು ಕೈಯಿಂದ ಮುಟ್ಟದೆ, ಬಾಯಿಂದಲೇ ಕಚ್ಚಿ ತಿಂದರು.

# ಹಳೇ ಓಬಳಾಪುರ ರೆಡ್ಡಿ ಕ್ಯಾಂಪ್ ಮುಖಂಡರು ಬಿಜೆಪಿಗೆ



ದಾವಣಗೆರೆ, ಏ.23- ಹರಪನಹಳ್ಳಿ ತಾಲ್ಲೂಕು ಹಳೇ ಓಬಳಾಪುರ ರೆಡ್ಡಿ ಕ್ಯಾಂಪ್‌ನ ಜಿ.ಅಶ್ವತ್ಥ್, ಜಿ.ಹರೀಶ್, ಉಮೇಶ್, ಸುರೇಶ್ ಅವರು ಕಾಂಗ್ರೆಸ್ ತೊರೆದು ಸಂಸದ ಜಿ.ಎಂ.ಸಿದ್ದೇಶ್ವರ್ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಗೊಂಡರು. ಟಿ.ಕೊಟ್ರೇಶ್, ಜಿ.ಅಶೋಕ್, ಜಿ. ಹನುಮಂತಪ್ಪ, ಎಸ್.ಕೊಟ್ರೇಶ್, ಎ.ಕೆಂಚಪ್ಪ, ಎ. ಹನುಮಂತಪ್ಪ, ಎಸ್.ಮಂಜಪ್ಪ, ಎನ್.ಅಣ್ಣೇಶ್, ಎಚ್. ತಿಮ್ಮಪ್ಪ, ಎಸ್.ಎಂ.ಮಂಜಪ್ಪ, ಎಸ್.ಮಂಜಪ್ಪ, ಕೊಟ್ರಪ್ಪ, ಹನುಮಂತಪ್ಪ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಂಡರು. ಸಂಸದ ಜಿ.ಎಂ.ಸಿದ್ದೇಶ್ವರ್, ಮಾಜಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಮಾಜಿ ಶಾಸಕ ಪ್ರೊ.ಲಿಂಗಣ್ಣ, ಜಿಲ್ಲಾಧ್ಯಕ್ಷ ಎನ್.ರಾಜಶೇಖರ್, ಮುರುಗೇಶ್ ಆರಾಧ್ಯ, ಎಸ್ಟಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಅನಿಲ್ ಕುಮಾರ್, ಶಿವಕುಮಾರ್, ದೇವರಮನೆ ಶಿವಕುಮಾರ್, ಪ್ರಸನ್ನ ಕುಮಾರ್, ಐರಣಿ ಅಣ್ಣೇಶ್, ಶಿವು ಇದ್ದರು.

## ಯುಜಿಸಿ ಎಚ್ಚರಿಕೆ

**(1ನೇ ಪುಟದಿಂದ)** ಕೋರ್ಸ್‌ಗಳ ಹೆಸರು ವಾಸ್ತವಿಕ ಪದವಿಯನ್ನು ಹೋಲುವಂತೆ ಇರುತ್ತದೆ ಎಂದು ಎಚ್ಚರಿಸಲಾಗಿದೆ.

ಕೇಂದ್ರ ಸರ್ಕಾರದ ಕಾಯ್ದೆಯಡಿ ಸ್ಥಾಪಿತವಾದ ವಿಶ್ವವಿದ್ಯಾಲಯ ಇಲ್ಲವೇ ಸಂಸ್ಥೆಗಳು ಮಾತ್ರ ಪದವಿ ನೀಡಬಹುದು ಎಂದು ಯು.ಜಿ.ಸಿ. ಹೇಳಿದೆ.

## ನಗರಕ್ಕೆ ಮೋದಿ

**(1ನೇ ಪುಟದಿಂದ)** ಭಾನುವಾರ ನಡೆಯಲಿರುವ ಪ್ರಚಾರ ಕಾರ್ಯಕ್ರಮದಲ್ಲಿ ಮೋದಿ ಪಾಲ್ಗೊಳ್ಳಲಿದ್ದಾರೆ.ಕೇಂದ್ರ ಸರ್ಕಾರದ ಕಾಯ್ದೆಯಡಿ ಸ್ಥಾಪಿತವಾದ ವಿಶ್ವವಿದ್ಯಾಲಯ ಇಲ್ಲವೇ ಸಂಸ್ಥೆಗಳು ಮಾತ್ರ ಪದವಿ ನೀಡಬಹುದು ಎಂದು ಯು.ಜಿ.ಸಿ. ಹೇಳಿದೆ.

# ಜಗಳೂರಿಗೆ ಏಕಲವ್ಯ ಮಾದರಿ ಶಾಲೆ ತರುವೆ: ಗಾಯತ್ರಿ

**(1ನೇ ಪುಟದಿಂದ)** ರೂಪಾಯಿ ಅನುದಾನ ಬಿಡುಗಡೆಯಾಗಿದೆ. ಈಗ ಸಿದ್ದೇಶ್ವರ ಧರ್ಮಪತ್ನಿ ಗಾಯತ್ರಿ ಸಿದ್ದೇಶ್ವರ ಅವರು ಸ್ಪರ್ಧಿಸಿದ್ದಾರೆ. ಅವರನ್ನು ಗೆಲ್ಲಿಸಿ, ದೆಹಲಿಗೆ ಕಳುಹಿಸುವ ಜವಾಬ್ದಾರಿ ನಿಮ್ಮ ಮೇಲಿದೆ.

ಇಲ್ಲಿ ಗೆದ್ದು ದೆಹಲಿಗೆ ಹೋದರೆ, ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗೋದು ಖಚಿತ. ಎಲ್ಲ ಕಾರ್ಯಕರ್ತರು ಇನ್ನೂ 15 ದಿನ ವಿರಮಿಸದೇ ಮನೆ - ಮನೆಗೂ ಹೋಗಿ ಗಾಯತ್ರಿ ಸಿದ್ದೇಶ್ವರ ಅವರ ಪರ ಮತಯಾಚಿಸಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ನಾನು ಕಾಂಗ್ರೆಸ್ ಪಕ್ಷದಲ್ಲಿದ್ದೆ. ಅಲ್ಲಿನ ವ್ಯವಸ್ಥೆ, ಅರಾಜಕತೆ ನೋಡಿ, ಜಿ.ಎಂ. ಸಿದ್ದೇಶ್ವರ ಅವರ ಅಭಿವೃದ್ಧಿ ಕೆಲಸಗಳು, ಎಲ್ಲರನ್ನೂ ತಮ್ಮವರು ಎನ್ನುವಂತೆ ಅಪ್ಪಿಕೊಳ್ಳುವ ಮನಸ್ಸು ನೋಡಿ ಬಿಜೆಪಿಗೆ ಬಂದಿದ್ದೇನೆ.

ನಾನು-ರಾಮಣ್ಣ ಇಬ್ಬರೂ ಒಂದಾಗಿ ಗಾಯತ್ರಿ ಸಿದ್ದೇಶ್ವರ ಅವರನ್ನು ಗೆಲ್ಲಿಸಲು ಪಣ ತೊಟ್ಟಿದ್ದೇವೆ.

ಕಾರ್ಯಕರ್ತರು ಕೂಡ ಇಲ್ಲಿ ಗಾಯತ್ರಿ ಸಿದ್ದೇಶ್ವರ ಅವರನ್ನು ಗೆಲ್ಲಿಸುವ ಮೂಲಕ ದೇಶದಲ್ಲಿ ಮತ್ತೊಮ್ಮೆ ಮೋದಿ ಯುಗಕ್ಕೆ ಹೊಸ ಭಾಷ್ಯ ಬರೆಯಬೇಕು ಎಂದು ತಿಳಿಸಿದರು.

ಜೆಡಿಎಸ್ ಮುಖಂಡ ಕಲ್ಲೇರುದ್ರೇಶ್ ಮಾತನಾಡಿ, ದಾವಣಗೆರೆಯಲ್ಲಿ 2 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗಾಯತ್ರಿ ಸಿದ್ದೇಶ್ವರ ಅವರು ಗೆಲುವು ಸಾಧಿಸಿ, ಇತಿಹಾಸ ಬರೆಯುವುದು ಖಚಿತ ಎಂದರು.

ಬಿಜೆಪಿ ಯುವ ಮುಖಂಡರಾದ ಜಿ.ಎಸ್. ಅನಿತ್ ಕುಮಾರ್, ಪಲ್ಲಾಗಟ್ಟೆ ಮಹೇಶ್, ಇಂದಿರಾ ರಾಮಚಂದ್ರ, ರೂಪ, ವಿಜಯಲಕ್ಷ್ಮಿ, ಮಂಡಲದ ಸದಸ್ಯರು, ಗ್ರಾಮ ಪಂಚಾಯಿತಿ ಸದಸ್ಯರು, ಬೂತ್ ಮಟ್ಟದ ಅಧ್ಯಕ್ಷರು, ಗ್ರಾಮದ ಬಿಜೆಪಿ ಮುಖಂಡರು ಸೇರಿದಂತೆ ಜಗಳೂರು ವಿಧಾನ ಸಭಾ ಕ್ಷೇತ್ರದ ಮುಖಂಡರು ಇದ್ದರು.

# ಮೊದಲ ಹಂತದ ಪ್ರಚಾರಕ್ಕೆ ಇಂದು ತೆರೆ

## ಹಳೇ ಮೈಸೂರು ಭಾಗದ 14 ಕ್ಷೇತ್ರಗಳಲ್ಲಿ ನಾಡಿದ್ದು ಲೋಕಸಭಾ ಚುನಾವಣೆ

ಬೆಂಗಳೂರು, ಏ. 23 - ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳ ಅಬ್ಬರದ ಪ್ರಚಾರಕ್ಕೆ ಬುಧವಾರ ಸಂಜೆ ತೆರೆ ಬೀಳಲಿದೆ.

ಮತದಾನಕ್ಕೆ 48 ಗಂಟೆಗಳ ಮೊದಲು ಬಹಿರಂಗ ಪ್ರಚಾರ ಸಮಯ ಅಂತ್ಯಗೊಳ್ಳುತ್ತಿದ್ದಂತೆ ಕ್ಷೇತ್ರದವರಲ್ಲದ ಕಾರ್ಯಕರ್ತರು, ಮುಖಂಡರು, ರಾಜಕಾರಣಿಗಳು ಕ್ಷೇತ್ರ ತೊರೆಯಬೇಕಾಗುತ್ತದೆ.

ಅಭ್ಯರ್ಥಿಗಳು ಮನೆ ಮನೆಗೆ ತೆರಳಿ ಮತ ಯಾಚನೆ ಮಾಡಲು ಅವಕಾಶ ಇರುತ್ತದೆ, ಆದರೆ, ಅವರು ಗುಂಪು ಕಟ್ಟಿಕೊಂಡು ಪ್ರಚಾರ ನಡೆಸುವಂತಿಲ್ಲ.

ಕ್ಷೇತ್ರ ವ್ಯಾಪ್ತಿಯ ಎಲ್ಲಾ ತೆರನಾದ ಮದ್ಯದ ಅಂಗಡಿಗಳು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳು ಶುಕ್ರವಾರ ಮಧ್ಯರಾತ್ರಿವರೆಗೆ ವಹಿವಾಟು ನಡೆಸು ವಂತಿಲ್ಲ. ಮೊದಲ ಹಂತದಲ್ಲಿ ಮಂಡ್ಯ, ಮೈಸೂರು-ಕೊಡಗು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಚಿತ್ರದುರ್ಗ, ತುಮಕೂರು, ಹಾಸನ, ಚಿಕ್ಕಬಳ್ಳಾಪುರ, ಕೋಲಾರ, ಉಡುಪಿ-ಚಿಕ್ಕಮಗಳೂರು, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ಮತದಾನ ನಡೆಯಲಿದೆ.

ಅಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೂ ಮತದಾರರು ಮತದಾನ ಮಾಡಲು ಕೇಂದ್ರ ಚುನಾವಣಾ ಆಯೋಗ ಅವಕಾಶ ಮಾಡಿಕೊಟ್ಟಿದೆ.

ಪ್ರಚಾರ ಅಂತ್ಯಗೊಳ್ಳಲು ಒಂದು ದಿನ ಬಾಕಿ ಇರುವ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ, ಕಾಂಗ್ರೆಸ್ ಅಧಿನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ,



ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಬಿರುಸಿನ ಪ್ರಚಾರ ನಡೆಸಿದರು. ಮೊದಲ ಹಂತದ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ, ಎನ್‌ಡಿಎ ಮೈತ್ರಿಕೂಟದ ಬಿಜೆಪಿ 11 ರಲ್ಲೂ, ಮಿತ್ರ ಪಕ್ಷ ಜೆಡಿಎಸ್ 3ರಲ್ಲೂ ಕಣಕ್ಕಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿಗೆ ಮೊದಲ ಹಂತದ ಕ್ಷೇತ್ರಗಳು ಪ್ರತಿಷ್ಠೆ ಕಣಗಳಾಗಿವೆ.

ಮುಖ್ಯಮಂತ್ರಿ ಅವರು ಪ್ರತಿನಿಧಿಸುವ ಮೈಸೂರು-ಕೊಡಗು ಹಾಗೂ ಚಾಮರಾಜನಗರ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿರುವುದರಿಂದ ಎರಡೂ ಕ್ಷೇತ್ರಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಅದರಲ್ಲೂ ಬಿಜೆಪಿ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಒಡೆಯರ್ ಅವರನ್ನು ಮುಖ್ಯಮಂತ್ರಿ ಅವರ ತವರು ಕ್ಷೇತ್ರದಲ್ಲಿ ಕಣಕ್ಕಿಳಿಸಿ ಆ ಕ್ಷೇತ್ರವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದೆ.

ಕುಮಾರಸ್ವಾಮಿ ಸ್ವತಃ ಮಂಡ್ಯ ಕ್ಷೇತ್ರದಲ್ಲಿ ಎನ್‌ಡಿಎ ಕೂಟದ ಅಭ್ಯರ್ಥಿ ಆಗಿರುವುದರಿಂದ ಅದು ಪ್ರತಿಷ್ಠಿತ ಕ್ಷೇತ್ರವಾಗಿ ಮಾರ್ಪಟ್ಟಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಬೆಂಗಳೂರು ಗ್ರಾಮಾಂತರದಲ್ಲಿ ನಾಲ್ಕನೇ ಬಾರಿಗೆ ಮರು ಆಯ್ಕೆ ಬಯಸಿ ಕಣಕ್ಕಿಳಿದಿದ್ದಾರೆ, ಅವರ ಪ್ರತಿ ಸ್ಪರ್ಧಿ ದೇವೇಗೌಡರ ಅಳಿಯ, ಹೃದಯ ತಜ್ಞ ಡಾ. ಮಂಜುನಾಥ್ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಈ ಕ್ಷೇತ್ರದ ಬಗ್ಗೆ ಜನತೆ ಕುತೂಹಲದಿಂದ ನೋಡುತ್ತಿದ್ದಾರೆ.

ಕಳೆದ 2019ರಲ್ಲಿ ಈ 14 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 11ರಲ್ಲೂ, ಕಾಂಗ್ರೆಸ್, ಜೆಡಿಎಸ್ ಹಾಗೂ ಪಕ್ಷೇತರರು ತಲಾ ಒಂದು ಸ್ಥಾನದಗಳಲ್ಲಿ ಗೆಲುವು ಗಳಿಸಿದ್ದರು.

ಬದಲಾದ ರಾಜಕೀಯ ಸ್ಥಿತಿಯಲ್ಲಿ ಜೆಡಿಎಸ್, ಬಿಜೆಪಿ ಜೊತೆ ಕೈಜೋಡಿಸಿ ಕಾಂಗ್ರೆಸ್ ವಿರುದ್ಧ ಕಣಕ್ಕಳಿದಿದೆ, ಎಲ್ಲಾ ಕ್ಷೇತ್ರಗಳನ್ನು ಎನ್‌ಡಿಎ ಒಕ್ಕೂಟ ತಮ್ಮದಾಗಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಷಾ ಈ ಕ್ಷೇತ್ರಗಳಲ್ಲಿ ಎರಡು ಬಾರಿ ಚುನಾವಣಾ ಪ್ರಚಾರ ಕೈಗೊಂಡಿದ್ದರು.

ಕೊನೆಯ ಎರಡು ದಿನಗಳಲ್ಲಿ ಮತದಾರರಿಗೆ ಆಮಿಷಗಳ ಮಹಾಪೂರವೇ ಹರಿದು ಬರುವ ಸಾಧ್ಯತೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ವೀಕ್ಷಕರು ತೀವ್ರ ನಿಗಾ ಇಟ್ಟಿದ್ದು, ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದೆ.

ಪ್ರತಿಯೊಂದು ಕ್ಷೇತ್ರಗಳ ಗಡಿ ಭಾಗಗಳಲ್ಲಿ ಸಂಚರಿಸುವ ವಾಹನಗಳ ಮೇಲೆ ತೀವ್ರ ನಿಗಾ ಇಡಲಾಗಿದ್ದು, ಸೂಕ್ತ ದಾಖಲೆಗಳಿಲ್ಲದ ಹಣ, ಬೆಲೆ ಬಾಳುವ ವಸ್ತುಗಳ ಸಾಗಾಣಿಕೆ ತಡೆಗೆ ಅಲ್ಲಲ್ಲಿ ತಪಾಸಣೆ ನಡೆಸಲಾಗುತ್ತಿದೆ.

## ನಗರದಲ್ಲಿ ಇಂದು ಅಕ್ಕಮಹಾದೇವಿ ಜಯಂತಿ

ದಾವಣಗೆರೆ ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಶರಣೆ, ವೈರಾಗ್ಯನಿಧಿ ಅಕ್ಕಮಹಾದೇವಿ ಜಯಂತಿ ಹಾಗೂ ದತ್ತಿ ಉಪನ್ಯಾಸ ಕಾರ್ಯಕ್ರಮವು ಕೆ. ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಉದ್ಘಾಟನೆ ಹೆಚ್.ಕೆ. ಬಸವರಾಜ್, ಅಧ್ಯಕ್ಷತೆ ಬಿ.ಎಸ್. ಚನ್ನಬಸಪ್ಪ, ಅನುಭಾವ ಡಾ. ಅನಿತ್ ದೊಡ್ಡಗೌಡರ್, ಮುಖ್ಯ ಅತಿಥಿಗಳಾಗಿ ಎಂ.ಎಸ್. ನಾಗರಾಜಪ್ಪ, ಎಂ. ಪರಮೇಶ್ವರಪ್ಪ ಸಿರಿಗೆರೆ, ಎಸ್.ಬಿ. ರುದ್ರಗೌಡರು, ಮಮತ ನಾಗರಾಜ್, ಪ್ರೊ. ಕೆ.ಎಸ್. ಗಂಗಾಧರ್ ಭಾಗವಹಿಸುವರು. ಸೌಮ್ಯ ಸತೀಶ್ ಮತ್ತು ಸಂಗಡಿಗರಿಂದ ವಚನ ಗಾಯನ ನಡೆಯಲಿದೆ.

# ಡಾ. ಪ್ರಭಾ ಮಲ್ಲಿಕಾರ್ಜುನ್ ಪರ ಚುನಾವಣಾ ಪ್ರಚಾರ

ದಾವಣಗೆರೆ, ಏ. 23 - ನಗರದ 39ನೇ ವಾರ್ಡ್ ವಿದ್ಯಾನಗರ ಕಾಂಗ್ರೆಸ್ ಕಾರ್ಯಕರ್ತರು, ಎಸ್.ಎಸ್ ಮತ್ತು ಎಸ್.ಎಸ್.ಎಂ ಬಳಗದವರು ವಿಘ್ನೇಶ್ವರನಿಗೆ ಪೂಜೆ ಸಲ್ಲಿಸಿ, ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ತರಳಬಾಳು ಬಡಾವಣೆಯಲ್ಲಿ ಮನೆ ಮನೆಗೆ ತೆರಳಿ ಬಿರುಸಿನ ಪ್ರಚಾರ ಆರಂಭಿಸಿದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಮುದೇಗೌಡ್ರ ಗೀರೀಶ್, ಜನತಾಬಜಾರ್ ಅಧ್ಯಕ್ಷ ಜಿ.ಡಿ. ಗುರುಸ್ವಾಮಿ, ಮಾಜಿ ಉಪಮಹಾಪೌರರಾದ ಬೆಳವನೂರು ನಾಗರಾಜಪ್ಪ, 39ನೇ ವಾರ್ಡ್ ಅಧ್ಯಕ್ಷ ಶಿವಕುಮಾರ್, ಡಿ.ಎಂ. ಕೊರಟಕೆರೆ, ನಿಕಟಪೂರ್ವ ಕಸಾಪ ಜಿಲ್ಲಾಧ್ಯಕ್ಷ ಡಾ.ಹೆಚ್.ಎಸ್ ಮಂಜುನಾಥ ಕುರ್ಕಿ, ಹರೀಶ್ ಕೆಂಗಲಹಳ್ಳಿ, ಹೆಚ್.ಡಿ. ಪ್ರಭುದೇವ್, ಸಿ.ಜಿ. ಶಿವಲಿಂಗಪ್ಪ, ಶಿವಮೂರ್ತಿ ನೇರ್ಲಿಗೆ, ಆರ್. ಜಿ. ರುದ್ರೇಶ್, ಬೆಳವನೂರು ಶಿವಕುಮಾರ್, ಲಿಂಗರಾಜ್ ಕೆ.ಎಂ. ಸಿ.ಟಿ. ಮಲ್ಲಿಕಾರ್ಜುನ, ಪಾಲಣ್ಣ ನಿಟ್ಟುವಳ್ಳಿ, ಹನುಮಂತಪ್ಪ ನಿಟ್ಟುವಳ್ಳಿ, ಲಾಂಡ್ರಿ ಹನುಮಂತಪ್ಪ, ಎಂ.ಯು. ಪ್ರಭುದೇವ್, ಆನಂದಪ್ಪ, ಆರ್.ಜಿ.ರವಿ, ಶ್ರೀಮತಿ ಶಾಂತಮ್ಮ ದಿಳ್ಯಪ್ಪ, ಕಲ್ಲನಗೌಡ, ನಂದಗೋಪಾಲ್, ನಾಗರಾಜ್ ಎಸ್. ಎಂ. ಸತೀಶ್ ಚೌಧರಿ, ವಿಜಯಕುಮಾರ್, ಟಿ.ಕೆ. ನಾಗರಾಜ್, ನಾಗೇಶ್, ಬಾಹುಬಲಿ ಸೇರಿದಂತೆ ಅನೇಕ ಕಾರ್ಯಕರ್ತರು ಭಾಗವಹಿಸಿದ್ದರು.



# ಬಡ ಕುಟುಂಬಕ್ಕೆ 15 ಸಾವಿರ ರೂ.

**(1ನೇ ಪುಟದಿಂದ)** ಸದಸ್ಯರು ಕಾಂಗ್ರೆಸ್‌ಗೆ ಬೆಂಬಲಿಸುತ್ತಿದ್ದೇವೆ. ಮುಂದಿನ ಚುನಾವಣೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮುಖ ನೋಡುವ ಬದಲು, ಅಭ್ಯರ್ಥಿಯನ್ನು ಪರಿಗಣಿಸಿ ಮತ ಚಲಾಯಿಸಬೇಕು ಎಂದರು.

ಕಾಂಗ್ರೆಸ್ ಸೇರಿದ ಎನ್.ಜಿ. ಪುಟ್ಟಸ್ವಾಮಿ ಮಾತನಾಡಿ, ಪ್ರಭಾ ಒಳ್ಳೆಯ ಅಭ್ಯರ್ಥಿಯಾಗಿದ್ದಾರೆ. ಜಿಲ್ಲೆಯಲ್ಲಿ ಎಲ್ಲೆಡೆ ಕಾಂಗ್ರೆಸ್ ಅಲೆ ಇದೆ ಎಂದು ಹೇಳಿದರು.

ಟಿ.ಜಿ. ರವಿಕುಮಾರ್ ಮಾತನಾಡಿ, ಬಿಜೆಪಿಯಲ್ಲಿ ಕಾರ್ಯಕರ್ತರನ್ನು ಕಡೆಗಣಿಸಲಾಗುತ್ತಿದೆ. ಹೀಗಾಗಿ ಆ ಪಕ್ಷದಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಕಾಂಗ್ರೆಸ್‌ಗೆ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ವೇದಿಕೆಯ ಮೇಲೆ ಕಾಂಗ್ರೆಸ್ ಮುಖಂಡರಾದ ಡಿ.ಬಸವರಾಜ್, ಅರಸಿಕೆರೆ ಕೊಟ್ರೇಶ್, ಬಿ.ಹೆಚ್. ವೀರಭದ್ರಪ್ಪ, ಎಸ್.ಎಲ್.ಆನಂದಪ್ಪ, ಹೆಚ್.ಕೆ ಬಸವರಾಜ್, ಅನಿತಾ ಬಾಯಿ ಮಾಲತೇಶ್ ಜಾಧವ್, ರುದ್ರಮ್ಮ ಎಸ್.ಕೆ.ಚಂದ್ರಶೇಖರ್, ತೆಲಗಿ ಈರಣ್ಣ, ಕೆಪಿಸಿಸಿ ಉಪಾಧ್ಯಕ್ಷ ಮುಜಾಮಿಲ್, ಬುತ್ತಿ ಹುಸೇನ್, ಕೋಳಿ ಇಬ್ರಾಹಿಂ, ಡೋಲಿ ಚಂದ್ರು, ವಕೀಲರಾದ ಪ್ರಕಾಶ್ ಪಾಟೀಲ್, ಜಯಕುಮಾರ್, ಈಶಣ್ಣ, ಮೋತಿ ರಾಜೇಂದ್ರ, ನೀಲಗಿರಿಯಪ್ಪ, ಮಟ್ಟಿಕಲ್ ಪ್ರತಾಪ್, ಫಜು, ಅಸ್ಗರ್, ಬಸವರಾಜ್, ಗಣೇಶ್, ಚಮನ್ ಸಾಬ್, ಚಂದ್ರಣ್ಣ, ನಾಗರಾಜ್, ರಾಜನಾಯ್ಕ್, ಹಾಲೇಶ್, ಅಣಜಿ ಚಂದ್ರಶೇಖರ್, ಉಮೇಶ್ ನಾಯಕ್, ಆಂಜನೇಯ ಗುರೂಜಿ, ಕೆ.ಪಿ. ಕಲ್ಲಿಂಗಪ್ಪ, ಬಾತಿ ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.


ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
29ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಮಾರ್ಚ್ 23 ರಿಂದ 2 ತಿಂಗಳ ಕಾಲ.
ಇಂದಿನ ಮಜ್ಜಿಗೆ ಪ್ರಾಯೋಜಕರು :-
ದಿ. ಮೋತಿ ರಾಮರಾವ್ ಇವರ ಜ್ಞಾಪಕಾರ್ಥವಾಗಿ
ಶ್ರೀ ಮೋತಿ ಪರಮೇಶ್ವರರಾವ್ ಮತ್ತು ಕುಟುಂಬ ವರ್ಗದವರ ಸೇವಾರ್ಥ,
ಕಾವೇರಿ ಎಂಟರ್‌ಪ್ರೈಸಸ್, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.
ಸ್ಥಳ : ಮಹಾನಗರ ಪಾಲಿಕೆ ಆವರಣ

ಮನೆಗಳು ಮಾರಾಟಕ್ಕಿವೆ
ಎಸ್.ಎಸ್. ಬಿ ಬ್ಲಾಕ್, ದಕ್ಷಿಣ 30x40 ಡುಪ್ಲೆಕ್ಸ್, ಡಿಸಿ ಮನೆ ಸರ್ಕಲ್ ಹತ್ತಿರ, ದಕ್ಷಿಣ 30x50 ಡುಪ್ಲೆಕ್ಸ್ (Hi-fi) ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x55 (ಗ್ರೌಂಡ್ ಫ್ಲೋರ್), ಶಿವ ಪಾರ್ವತಿ ಬಡಾವಣೆ ಪಶ್ಚಿಮ 30x45 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ್
99457 02495

ಸೈಟ್ ಮಾರಾಟಕ್ಕೆ (KHB)
ಕರ್ನಾಟಕ ಹೌಸಿಂಗ್ ಬೋರ್ಡ್ ಕಮರ್ಷಿಯಲ್
12x18 ಮೀ (40X60 ಉತ್ತರ 100 ಅಡಿ ರಸ್ತೆಗೆ (89 ಲಕ್ಷ)
ಕಿರಣ್ ಬೂಸ್ನೂರ್
98440 63409, 97315-63409
ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ

ಡ್ರೈವರ್, ಲೇಬರ್ ಬೇಕಾಗಿದ್ದಾರೆ
ಸಂಪರ್ಕಿಸಿ :
ಎಸ್.ವಿ. ಮಾರ್ಕೆಟಿಂಗ್
63620 23451, 97434 37003

2 BHK ಮನೆ ಬಾಡಿಗೆಗಿದೆ
ಜೆ.ಹೆಚ್. ಪಟೇಲ್ ಬಡಾವಣೆ, #121, 'ಡಿ' ಬ್ಲಾಕ್, 3ನೇ ಮೇನ್, 3ನೇ ಕ್ರಾಸ್‌ನಲ್ಲಿ ಎರಡು ಬೆಡ್ ರೂಂ ಮನೆ ಗ್ರೌಂಡ್ ಫ್ಲೋರ್‌ನಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ. 94813-60877

ಪ್ರಾಪರ್ಟಿ ಹಬ್
ಇ ಸಿ
ಇ - ಸ್ವತ್ತು
ಕಟ್ಟಡ ಲೈಸೆನ್ಸ್
ಖಾತೆ ಬದಲಾವಣೆ
96118 66449

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಮನೆಗಳು ಮಾರಾಟಕ್ಕಿವೆ
KHB ಕಾಲೋನಿ ಜಡ್ಜ್ ಕ್ವಾಟರ್ಸ್ ಸರ್ಕಲ್ ಹತ್ತಿರ, ಪೂರ್ವ 50x80, ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಪೂರ್ವ 30x40, ಪಶ್ಚಿಮ 30x50, ವಿದ್ಯಾನಗರ ಕಾಫಿ ಡೇ ಸರ್ಕಲ್ ಹತ್ತಿರ ದಕ್ಷಿಣ 50x85
ಐಗೂರು ವಿಜಯಕುಮಾರ್
99457 02495

ಸೈಟ್ ಮಾರಾಟಕ್ಕೆ (KHB)
1) 40X60 ಪಶ್ಚಿಮ (69 ಲಕ್ಷ)
2) 40x60 ದಕ್ಷಿಣ (60 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ಲೊಕೇಷನ್ ತುಂಬಾ ಚೆನ್ನಾಗಿದೆ)

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ರಜಾ ಸೂಚನೆ
ಕಾವೇರಿ ಉಪಹಾರ ದರ್ಶಿನಿ ಹೋಟೆಲ್
ಮಹಾತ್ಮಗಾಂಧಿ ಸರ್ಕಲ್, ದಾವಣಗೆರೆ.
ದಿ. : 24, 25, 26 (ಬುಧವಾರದಿಂದ ಶುಕ್ರವಾರದವರೆಗೆ) ಕಾರ್ಯನಿಮಿತ್ತ ರಜಾ ಇರುತ್ತದೆ. ಗ್ರಾಹಕರು ಎಂದಿನಂತೆ ಸಹಕರಿಸಬೇಕಾಗಿ ವಿನಂತಿ.

ಬೇಕಾಗಿದ್ದಾರೆ
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಶಾಮನೂರು ರೋಡ್, ದಾವಣಗೆರೆ. ಸಂಪರ್ಕಿಸಿ :
98861 66432

ಸುವರ್ಣಾವಕಾಶ
MG ಗೋಲ್ಡ್ ಕಂಪನಿ
ನಿಮ್ಮ ಹಳೆಯ ಚಿನ್ನದ ಆಭರಣಗಳನ್ನು ಅಥವಾ ನೀವು ಅಡವು ಇಟ್ಟ ನಿಮ್ಮ ಚಿನ್ನ ಆಭರಣಗಳನ್ನು ಬಿಡಿಸಿ, ಇಂದಿನ ಸೂಕ್ತ ಬೆಲೆಗೆ ತೆಗೆದುಕೊಳ್ಳುತ್ತೇವೆ
ಮೊ.: 9343546891, 7019426891

ಬೇಕಾಗಿದ್ದಾರೆ
ಖಾಸಗಿ ಕಂಪನಿಯಲ್ಲಿ ಏಜೆಂಟರಾಗಿ ಕೆಲಸ ಮಾಡಲು ಮಹಿಳಾ ಹಾಗೂ ಪುರುಷರು ಬೇಕು. ಸಂಪರ್ಕಿಸಿರಿ :
84531 61869

ಮನೆ ಬಾಡಿಗೆಗೆ ಇದೆ
1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
# 2111, 3ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ.
94822 41456

ಬಾಡಿಗೆಗೆ ಇದೆ
ಚೇತನ ಹೋಟೆಲ್ ರಸ್ತೆಯಲ್ಲಿ 2BHK ಮನೆ ಬಾಡಿಗೆಗೆ ಇದೆ.
ಸಸ್ಯಹಾರಿಗಳಿಗೆ ಮಾತ್ರ.
94492 66133, 97425 18228

TUITIONS
IGCSE, ICSE, CBSE and State Board from class 5th to 12th MCC A Block
98444 92888

ಬೋರ್ ವೆಲ್ ಪಾಯಿಂಟ್
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ :
97436 54365, 86609 98651

WANTED IMMEDIATELY
Experienced Head master/ Accountant /teachers for nursery primary and high school all subjects
@ M.E.S CONVENT
WALK IN INTERVIEW
25.4.2024. 10.30 am to 12 noon along with all testimonials and apply #5699, Anjeneya badavane 9 th cross near indragiri chandragiri appartment Davangere -577004.
98804 36414 98800 30171

ಮಳಿಗೆಗಳು ಬಾಡಿಗೆ ಇವೆ
ಮಂಡಿಪೇಟೆಯ ಒಂದೇ ಕಾಂಪ್ಲೆಕ್ಸ್‌ನಲ್ಲಿ ಮೂರು ಮಳಿಗೆಗಳು ಲಭ್ಯವಿದ್ದು, ಆಸಕ್ತರು ಕೂಡಲೇ ಈ ಕೆಳಗಿನ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ :
96865 51303 ,99806 29965

ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
Shah Opticals
4th Main, Opp. Drushti Eye Hospital, P.J Extension, Davanagere - 577002
93536 89957

WANTED
Retail experience store Manager Male / Female Branded Store Firstcry. Com, CG Hospital Road, Davanagere - 577002.
Contact :
83108 00027

ಮನೆ ಮಾರಾಟಕ್ಕಿದೆ
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸಿನಲ್ಲಿರುವ #2001ರಲ್ಲಿ 30x40 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಶ್ರೀ ಜಿ.ಹೆಚ್. ಮಂಜುನಾಥ್
88849 62111

WANTED LADY TEACHERS
D.Ed- 5, BA, BE.d - 5, B.Sc, B.Ed - 5, Computer Teacher - 2, NTC-5, Aya-3
95356 10817

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ , ದಾವಣಗೆರೆ-577002.
97402 58276

ಬೇಕಾಗಿದ್ದಾರೆ
ಕಿರಾಣಿ ಅಂಗಡಿ ಹಾಗೂ ಹೋಲ್ ಸೇಲ್ ಅಂಗಡಿಗೆ ಅಕೌಂಟ್ಸ್ ವಿಭಾಗದಲ್ಲಿ ಕೆಲಸ ಮಾಡಲು ಟ್ಯಾಲಿ ಅನುಭವವುಳ್ಳ ಹುಡುಗಿಯರು ಬೇಕಾಗಿದ್ದಾರೆ. ಸಂಬಳ 7000 ರಿಂದ 8000. ಈ ಕೆಳಗಿನ ನಂಬರ್‌ಗೆ ರೆಸ್ಯೂಮ್ ಕಳುಹಿಸಿ
94481 09762

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ದುಗ್ಗಮ್ಮದೇವಿ ಪ್ರಸನ್ನ
ಟಗರು ಮಾರಾಟಕ್ಕಿದೆ
ನೇರ ರೈತರಿಂದ ಮಾರಾಟ 2 ಹಲ್ಲು, 4 ಹಲ್ಲಿನ ಟಗರುಗಳು ಸಿಗುತ್ತವೆ. ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ.
80883 67539, 97390 63544


TO-LET
COMMERCIAL / OFFICE SPACE
1st and 2nd Floor 220 Sq.ft newly built office space available for Rent.
Location : Hadadi Road, Opp. Araike Hospital Davanagere.
74066 59695, 79751 77934

ಉದ್ಯೋಗಾವಕಾಶ
ಹೆಸರಾಂತ ಕಂಪನಿಗಳಿಗೆ SSLC, PUC, ITI, Diploma, Any Degree ಪಾಸ್/ಫೇಲ್ ಆದ ಹಾಗೂ B.Sc Nursing, GNM Nursing, B.Com Tally ಪಾಸಾಗಿರುವ ಅಭ್ಯರ್ಥಿಗಳು, ಗಾರ್ಮೆಂಟ್ಸ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ :
ಶ್ರೀ ಕಲ್ಪತರು ಏಜೆನ್ಸೀಸ್, ದಾವಣಗೆರೆ.
92411 22555

WANTED
Lady Teachers
Nursery Section - Any Degree Fluency English is Must.
91645 05229, 77950 66883
SRP Convent, 87478 22749
Anjaneya Badavane, 17th Cross, Davanagere-4

ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ
SSLC/ PUC / ITI/ DIPLOMA ಪಾಸ್/ಫೇಲ್ ಆದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
ಜ್ಯೋತಿ ಮೆಟಲ್ಸ್
ಹಳೇ ಬಸ್ ಸ್ಟ್ಯಾಂಡ್.ಪಿ.ಬಿ.ರಸ್ತೆ, ಗಣಪತಿ ಗುಡಿ ಪಕ್ಕ, ದಾವಣಗೆರೆ.
98800 34643, 94800 51462

OFFICE SPACE FOR RENT
1, 2 & Basement Floor, (1000Sqft + Lift) ATM / Mobiles Shop Space, PB Road, Opp, RH Office Dvg.
99646 99096

ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26
ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

CHANGE OF NAME
I Sowbhagya (Old Name) w/o Sangappa B.G. Resident of Grama Panchayath Road, Bethur Village, Davanagere (T) (D) I have Changed my name to Sowbhagya B.G. Vide affidavit before Davanagere Notary. All the furure Transactions will be in the new name as under Signed. SOWBHAGYA B.G.

ಅಧಿಕೃತ ಚೀಟಿ ಸಂಸ್ಥೆ
ರೂ. 5 ಲಕ್ಷ ಚೀಟಿ ಪ್ರಾರಂಭ.
50 ಸದಸ್ಯರು 6500ರೂ. ರಿಂದ 10,000 ರೂ. ವರೆಗೆ
ಸ್ಕಂದ ಚಿಟ್ ಫಂಡ್ಸ್ (ರಿ)
78997 75159

WANTED
Lady Teachers
1. B.Sc, B.Ed - Maths - 2
2. B.Sc / B.Com (Primary) - 4
3. Note - Fluency English is must.
Mount Everest Vidyalaya,
Jayanagara `C' Block, Nittuvalli, Dvg-4
97439 24203, 91136 10789

ಕರ್ನಾಟಕ ಮುಕ್ತ ವಿದ್ಯಾಲಯ (KOS)
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
ಎಸ್ಸೆಸ್ಸೆಲ್ಸಿ/ಪಿಯುಸಿ/ಪದವಿ/ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್,
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

ಶಿಕ್ಷಕಿಯರು ಬೇಕಾಗಿದ್ದಾರೆ
ಜ್ಞಾನದೀಪ ಪಬ್ಲಿಕ್ ಸ್ಕೂಲ್, 60 ಅಡಿ ರಿಂಗ್ ರಸ್ತೆ, ನಿಟ್ಟುವಳ್ಳಿ, ದಾವಣಗೆರೆ - 577004.
1) B.A. B.Ed, History / Kannada - 2, 2) B.A. B.Ed, History / English - 2, 3) Hindi B.Ed - 1, 4) B.Sc / B.Sc B. Ed - 1 (PCM) 5) PUC / B.A D.Ed - 2, 6) PUC / R.B.S.T / NTC - 2
ಸಹಿ/- ಕಾರ್ಯದರ್ಶಿಗಳು
94496 79346, 89710 18943

ಹೋಟೆಲ್ ಕೆಲಸಕ್ಕೆ ಸಪ್ಲೈಯರ್ ಬೇಕಾಗಿದ್ದಾರೆ
ಸಾನ್ವಿ ರೆಸ್ಟೋರೆಂಟ್,
ಹೈಟೆಕ್ ಆಸ್ಪತ್ರೆ ರಸ್ತೆ, ಲಕ್ಷ್ಮೀ ಲೇ ಔಟ್, ದಾವಣಗೆರೆ.
80889 55916
90197 23292

ಕಾರ್ ಬಾಡಿಗೆಗೆ
ಸಂಪರ್ಕಿಸಿ :
97436 54365
86609 98651

# ಗಾಳಿಪಟದಂತೆ ಸ್ವತಂತ್ರವಾಗಿ ಮತದಾನ ಮಾಡಲು ಕರೆ

## ಚುನಾವಣಾ ಜಾಗೃತಿಗೆ ಜಿಲ್ಲಾಡಳಿತದಿಂದ ಗಾಳಿಪಟ



ದಾವಣಗೆರೆ, ಏ. 23 - ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರ ಸಹಾಯದೊಂದಿಗೆ ಸೋಮವಾರ ಹೈಸ್ಕೂಲ್ ಮೈದಾನದಲ್ಲಿ ಗಾಳಿಪಟ ಹಾರಿಸುವ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು .

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷ ಸುರೇಶ್ ಬಿ.ಇಟ್ನಾಳ್ ಮಾತನಾಡಿ ವಿಭಿನ್ನ ರೀತಿಯಲ್ಲಿ ಉನ್ನತ ಮಟ್ಟದಲ್ಲಿ ಗಾಳಿಪಟ ಹಾರಿಸುವ ಮೂಲಕ ಮತದಾನ ಜಾಗೃತಿ ಸಂದೇಶ ನೀಡಲಾಗಿದೆ. ಗಾಳಿಪಟವು ಹೇಗೆ ಸ್ವತಂತ್ರವಾಗಿ ಹಾರಾಡುತ್ತದೆಯೋ, ಅದೇ ರೀತಿ ನೀವೂ ಸಹ ಸ್ವತಂತ್ರವಾಗಿ, ನ್ಯಾಯ ಸಮ್ಮತವಾಗಿ, ಯಾವುದೇ ಆಮಿಷಗಳಿಗೆ ಒಳಗಾಗದೇ ಮೇ 7 ರಂದು ತಮ್ಮ ಅಮೂಲ್ಯ ಮತ ಚಲಾಯಿಸಬೇಕೆಂದು ತಿಳಿಸಿದರು. ಗಾಳಿಪಟದಲ್ಲಿ ಮತದಾರರ ಸಂದೇಹ, ಮಾಹಿತಿಗೆ 1950 ಬಳಸಿ, ಯಾವುದೇ ಮತದಾರರು ಮತದಾನದಿಂದ ಹೊರಗುಳಿಯಬಾರದು. ಮೇ 7 ರಂದು 'ನಮ್ಮನಡೆ, ಮತಗಟ್ಟೆ ಕಡೆ' ಎಂಬ ಇತ್ಯಾದಿ ಘೋಷ ವಾಕ್ಯಗಳು ಗಾಳಿಪಟದಲ್ಲಿ ರಾರಾಜಿಸುತ್ತಿದ್ದವು.

ಕಾರ್ಯಕ್ರಮದಲ್ಲಿ ಚುನಾವಣಾ ಐಕಾನ್ ಚಿತ್ರನಟ ಪೃಥ್ವಿ ಶಾಮನೂರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯ್ಕ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕ ಡಾ. ಚಂದ್ರಶೇಖರ್ ಸುಂಕದ್, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಗಾಯತ್ರಿ ಕೆ.ಎಚ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬೇಬಿ ಸುನೀತ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ನಗರಕ್ಕಿಂದು ವಿ.ನ್ಯಾಯಮೂರ್ತಿ ಹೆಚ್. ಬಿಲ್ಲಪ್ಪ



ಜಿಲ್ಲಾ ವಕೀಲರ ಸಂಘದ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ 133ನೇ ಜಯಂತಿ ಅಂಗವಾಗಿ ಅಂಬೇಡ್ಕರ್ ಮತ್ತು ಸಂವಿಧಾನ ಎನ್ನುವ ವಿಷಯ ಕುರಿತು ಉಪನ್ಯಾಸ ಮಾಲಿಕೆ 8ನ್ನು ಇಂದು ಮಧ್ಯಾಹ್ನ 2.30ಕ್ಕೆ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಉಚ್ಚನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಹೆಚ್. ಬಿಲ್ಲಪ್ಪ ನೆರವೇರಿಸುವರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ, 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಜಿ.ವಿ. ವಿಜಯಾನಂದ, ಕಾನೂನು ಅಧಿಕಾರಿ ಎ.ಎಂ.ಬಸವರಾಜು, ಸರ್ಕಾರಿ ಅಭಿಯೋಜಕ ಬಿ. ಮಂಜುನಾಥ್, ಜಿಲ್ಲಾ ಸರ್ಕಾರಿ ವಕೀಲ ಎಸ್. ಪ್ರಕಾಶ್ ಆಗಮಿಸಲಿದ್ದಾರೆ.

## ಹರಿಹರದಲ್ಲಿ ಹನುಮ ಜಯಂತಿ




ಹರಿಹರ, ಏ.23- ನಗರದ ಹೆಚ್.ಶಿವಪ್ಪ ವೃತ್ತದಲ್ಲಿರುವ ಪೇಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಇಂದು ಹನುಮ ಜಯಂತಿ ನಿಮಿತ್ತವಾಗಿ ಶ್ರೀ ಆಂಜನೇಯಸ್ವಾಮಿ, ನವಗ್ರಹ ಸ್ವಾಮಿ ಮತ್ತು ಶನೇಶ್ವರ ಸ್ವಾಮಿಗೆ ವಿಶೇಷ ಅಭಿಷೇಕ, ಅಲಂಕಾರ, ಮಹಾ ಮಂಗಳಾರತಿ, ತೊಟ್ಟಿಲು ಪೂಜೆ, ಪ್ರಸಾದ ವಿನಿಯೋಗ ನಂತರ ಸಂಜೆ ಆಂಜನೇಯಸ್ವಾಮಿ ಪಲ್ಲಕ್ಕಿಯಲ್ಲಿ ಉತ್ಸವ ಮೂರ್ತಿಯನ್ನು ಇಟ್ಟು ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಪೇಟೆ ಆಂಜನೇಯಸ್ವಾಮಿ ದೇವಸ್ಥಾನ ಪ್ರಧಾನ ಅರ್ಚಕರು ವೆಂಕಟೇಶ್, ಹಿಂದೂ ಜಾಗರಣ ವೇದಿಕೆಯ ದಿನೇಶ್, ಚಂದನ್ ಮೂರ್ಕಲ್, ಶಿವು, ಮಹೇಶ್, ಚಂದ್ರಕಾಂತ್, ಗಿರೀಶ್, ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಸತ್ಯಸಾಯಿ ಬಾಬಾರವರ ಆರಾಧನಾ ಮಹೋತ್ಸವ

ಶ್ರೀ ಸತ್ಯಸಾಯಿ ಸೇವಾ ಸಂಸ್ಥೆ ವತಿಯಿಂದ ಆರಾಧನಾ ಮಹೋತ್ಸವವು ಪಿ.ಜೆ. ಬಡಾವಣೆಯ ಸತ್ಯಸಾಯಿ ಮಂದಿರದಲ್ಲಿ ಇಂದು ನಡೆಯಲಿದೆ. ಬೆಳಿಗ್ಗೆ 6.30ಕ್ಕೆ ಸಾಯೀಶ್ವರ ಲಿಂಗಕ್ಕೆ ರುದ್ರಾಭಿಷೇಕ, 11.30ಕ್ಕೆ ಸುಮಾರು ಒಂದು ಸಾವಿರ ಜನರಿಗೆ ಮಹಾನಾರಾಯಣ ಸೇವೆ, ಮಹಾ ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 6.30 ರಿಂದ 7.30 ಶ್ರೀ ರುದ್ರ ಪಠಣ ಮತ್ತು ಭಜನೆ, 7.30 ರಿಂದ 8ರವರೆಗೆ ಜಗನ್ನಾಥ್ ನಾಡಿಗೇರ್ ಅವರಿಂದ ಉಪನ್ಯಾಸ, 8 ರಿಂದ 8.30 ರವರೆಗೆ ಪಲ್ಲಕ್ಕಿ ಉತ್ಸವ, ಮಹಾಮಂಗಳಾರತಿ ಹಾಗೂ ಮಹಾ ಪ್ರಸಾದ ವಿನಿಯೋಗ ನಡಯಲಿದೆ.

## ಎಲ್ಲೆಡೆ ಸಂಭ್ರಮದ ಹನುಮ ಜಯಂತಿ



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆಯ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮ ಜಯಂತಿ ಅಂಗವಾಗಿ ರಥೋತ್ಸವ ನಡೆಯಿತು.

ದಾವಣಗೆರೆ, ಏ.23- ಶ್ರೀರಾಮನ ಪರಮ ಭಕ್ತ ಹನುಮ ಜಯಂತಿ ಅಂಗವಾಗಿ ಜಿಲ್ಲಾದ್ಯಂತ ಮಾರುತಿ ಮಂದಿರಗಳಲ್ಲಿ ಶನಿವಾರ ಶ್ರದ್ಧಾ-ಭಕ್ತಿಯಿಂದ ಪೂಜೆ, ಪುನಸ್ಕಾರ ನೆರವೇರಿಸಲಾಯಿತು.

ಬೆಳಗ್ಗೆಯಿಂದಲೇ ವಾಯು ಪುತ್ರನಿಗೆ ಮಹಾಭಿಷೇಕ, ರುದ್ರಾಭಿಷೇಕ ನೆರವೇರಿಸಲಾಯಿತು. ಹೋಮ-ಹವನದ ಮೂಲಕ ಪ್ರಾರ್ಥನೆ ಸಲ್ಲಿಸಲಾಯಿತು. ತುಳಸಿ ಅರ್ಚನೆ ಹಾಗೂ ಮಹಾಮಂಗಳಾರತಿ ಬೆಳಗಿ ಇಷ್ಟಾರ್ಥಗಳೊಂದಿಗೆ ನಾಡಿನ ಸಮೃದ್ಧಿಗೆ ಪ್ರಾರ್ಥಿಸಲಾಯಿತು.

ಹನುಮಾನ್ ಜಯಂತಿ ಹಬ್ಬವನ್ನು ಪ್ರತಿ ವರ್ಷ ಚೈತ್ರ ಮಾಸದ ಶುಕ್ಲ ಪಕ್ಷದ ಹುಣ್ಣಿಮೆ ದಿನದಂದು ಆಚರಿಸಲಾಗುತ್ತದೆ. ಪವನ ಸುತನಾದ ಆಂಜನೇಯ ಸ್ವಾಮಿಯು ಈ ದಿನದಂದು ಜನಿಸಿದನು ಎನ್ನುವ ನಂಬಿಕೆಯಿದೆ. ಆಂಜನೇಯ ಸ್ವಾಮಿಯ ಆಶೀರ್ವಾದ ಪಡೆದುಕೊಳ್ಳುವುದಕ್ಕಾಗಿ ಜನರು ಈ ದಿನ ಹನುಮಂತನನ್ನು ವಿಶೇಷ ರೀತಿಯಲ್ಲಿ ಪೂಜಿಸುತ್ತಾರೆ.

ಪುರಾಣಗಳ ಪ್ರಕಾರ ನೋಡುವುದಾದರೆ ರಾಮನಿಗಿಂತ ಮುಂಚೆಯೇ ಹನುಮ ಹುಟ್ಟಿದ ಎಂಬ ನಂಬಿಕೆ ಇದೆ. ರಾಮನು ಚೈತ್ರ ಮಾಸದ ನವಮಿ ದಿನ ಹುಟ್ಟಿದರೆ, ಹನುಮ ಚೈತ್ರ ಮಾಸದ ಹುಣ್ಣಿಮೆ ದಿನ ಹುಟ್ಟಿದನು. ಪುರಾಣಗಳ ಪ್ರಕಾರ ಯಾವುದೇ ದೇವರು ಅವತಾರ ತಾಳುವ ಮುನ್ನ ಅವರಿಗಿಂತ ಅವರ ಸೇವಕ ಮುನ್ನವೇ ಅವತಾರ ತಾಳುವುದು ಸಂಪ್ರದಾಯ. ಅಂದ ಹಾಗೆ ರಾಮನ ಮುಂಚೆ ಹನುಮ ಜನ್ಮತಾಳಿದ ಅನ್ನುವ ಪ್ರತೀತಿ ಇದೆ.

## ನೇಹಾ ಹತ್ಯೆ ಖಂಡಿಸಿ ಜಂಗಮ ಸಮಾಜದ ಪ್ರತಿಭಟನೆ



ದಾವಣಗೆರೆ, ಏ. 23- ಹುಬ್ಬಳ್ಳಿಯ ಕಾಂಗ್ರೆಸ್ ಕಾರ್ಪೊರೇಟರ್ ಪುತ್ರಿ ನೇಹಾ ಹಿರೇಮಠ್ ಹತ್ಯೆ ಪ್ರಕರಣ ಖಂಡಿಸಿ ಜಿಲ್ಲಾ ಜಂಗಮ ಸಮಾಜದಿಂದ ನಗರದ ಜಯದೇವ ಸರ್ಕಲ್‌ನಲ್ಲಿ ಮೊನ್ನೆ ಮೇಣದ ಬತ್ತಿ ಹೊತ್ತಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ನೇಹಾ ಹಿರೇಮಠ್ ಅವರ ಘಟನೆ ಅಮಾನವೀಯವಾಗಿದೆ. ಇಂತಹ ಘಟನೆ ಮರುಕಳಿಸದಂತೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ನೇಹಾ ಅವರ ಕುಟುಂಬಕ್ಕೆ ಈ ದುಃಖ ಭರಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಪ್ರಾರ್ಥಿಸಿದರು.

ಜಿಲ್ಲಾ ಜಂಗಮ ಸಮಾಜದ ಮುಖಂಡ ಹಾಗೂ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನ ಅಧ್ಯಕ್ಷ ಎನ್.ಎ. ಮುರುಗೇಶ್ ಮಾತನಾಡಿ, ನೇಹಾ ಹತ್ಯೆ ಪ್ರಕರಣವನ್ನು ಖಂಡಿಸಿ, ಮಗಳನ್ನು ಕಳೆದುಕೊಂಡ ಆ ತಂದೆ-ತಾಯಿಯ ಆಕ್ರಂದನ ನೋಡಲಾಗದು. ನಮ್ಮ ಸರ್ಕಾರ, ನ್ಯಾಯಾಂಗ ವ್ಯವಸ್ಥೆ ಹಾಗೂ ಪೊಲೀಸ್ ಆದಷ್ಟು ಬೇಗ ನೇಹಾ ಹಿರೇಮಠ್ ಸಾವಿಗೆ ನ್ಯಾಯ ದೊರಕುವಂತೆ ಮಾಡಲಿ ಎಂದರು.

ಸಾಹಿತಿ ಬಾ.ಮ. ಬಸವರಾಜಯ್ಯ ಮಾತನಾಡಿ, ರಾಜ್ಯದಲ್ಲಿ ದಿನೇ ದಿನೇ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಅಮಾಯಕ ಹೆಣ್ಣುಮಕ್ಕಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು. ಈ ಘಟನೆಯನ್ನು ಸಾಮಾನ್ಯವಾಗಿ ತೆಗೆದುಕೊಳ್ಳಬಾರದು. ಆರೋಪಿಗೆ ತಕ್ಷಣ ಶಿಕ್ಷೆಯಾಗಬೇಕು. ಸರ್ಕಾರವೇ ಮಹಿಳೆಯರ ರಕ್ಷಣೆಗೆ ಪರವಾನಿಗೆಯ ಆಯುಧ ನೀಡುವಂತಹ ವ್ಯವಸ್ಥೆ ಜಾರಿಗೆ ಬರಬೇಕು ಎಂದರು.

ಆರೋಪಿ ಮತ್ತು ಅವನಿಗೆ ಸಹಕಾರ ನೀಡಿದ ಎಲ್ಲರಿಗೂ ಕಠಿಣ ಶಿಕ್ಷೆ ವಿಧಿಸಬೇಕು ಎಂದು ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಹೆಚ್.ಎಂ. ರುದ್ರಮುನಿಸ್ವಾಮಿ ಒತ್ತಾಯಿಸಿದರು.

## ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

ದಾವಣಗೆರೆ, ಏ.23 - ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕಸೇವಾ ಆಯೋಗ ನಡೆಸಲಿರುವ ಕೆಎಎಸ್ ಮತ್ತು ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕರಾಮುವಿ ಕೇಂದ್ರ ಕಚೇರಿಯಲ್ಲಿ ನಡೆಸಲಾಗುವುದು. ಆಸಕ್ತರು ಇದೇ ದಿನಾಂಕ 30ರೊಳಗಾಗಿ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ 0821-2515 944 ಸಂಪರ್ಕಿಸಲು ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ ತಿಳಿಸಿದ್ದಾರೆ.



## ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಪಡೆದ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್

ಹರಪನಹಳ್ಳಿ, ಏ. 23 - ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಹರಪನಹಳ್ಳಿ ತೆಗ್ಗಿನ ಮಠದ ಸಂಸ್ಥಾನದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು, ಹಂಪಸಾಗರದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು, ಟಿ.ಎಂ.ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

## ನಾಳೆ 85 ವರ್ಷ ಮೇಲ್ಪಟ್ಟ ನಾಗರಿಕರು, ವಿಶೇಷಚೇತನರು ಮನೆಯಲ್ಲಿಯೇ ಮತದಾನ

ದಾವಣಗೆರೆ, ಏ.23 - ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ದೇಶದ ಮೂರನೇ ಹಂತ, ರಾಜ್ಯದಲ್ಲಿ ಎರಡನೇ ಹಂತದಲ್ಲಿ ಚುನಾವಣೆ ನಡೆಯುತ್ತಿದ್ದು, 85 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು ಹಾಗೂ ವಿಶೇಷಚೇತನರು ಮನೆಯಲ್ಲಿಯೇ ಮತದಾನ ಮಾಡಲು ಚುನಾವಣಾ ಆಯೋಗ ಅವಕಾಶ ಮಾಡಿಕೊಟ್ಟಿದೆ. ದಾವಣಗೆರೆ ಕ್ಷೇತ್ರದಲ್ಲಿ ಮನೆಯಲ್ಲಿಯೇ ಮತದಾನ ಮಾಡುವ ಪ್ರಕ್ರಿಯೆಯು ನಾಡಿದ್ದು ದಿನಾಂಕ 25 ರಿಂದ 27 ರ ವರೆಗೆ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

ಮೊದಲ ಹಂತದಲ್ಲಿ ದಿನಾಂಕ 25 ರಿಂದ 27 ರ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಮತಪತ್ರದ ಮೂಲಕ ಗೃಹ ಮತದಾನ ನಡೆಯಲಿದ್ದು, ಮತದಾನ ಮಾಡಲು ಸಾಧ್ಯವಾಗದ ಸಂದರ್ಭದಲ್ಲಿ ಇದೇ ದಿನಾಂಕ 27 ರಂದು ಕೊನೆಯ ಭೇಟಿ ನೀಡಿ ಮನೆಯಲ್ಲಿಯೇ ಮತದಾನ ಮಾಡಿಸಲಾಗುತ್ತದೆ. ಮನೆಯಲ್ಲಿಯೇ ಮತದಾನಕ್ಕೆ ಪ್ರತಿ ಮಾರ್ಗಕ್ಕೆ ಮತಗಟ್ಟೆ ಅಧಿಕಾರಿ, ಸಿಬ್ಬಂದಿ, ರಕ್ಷಣಾ ಸಿಬ್ಬಂದಿ ಮತ್ತು ಪೂರಕ ಸದಸ್ಯರನ್ನು ಒಳಗೊಂಡ ತಂಡ ಮನೆಗೇ ಬಂದು ಮತದಾನ ಮಾಡಿಸಲಿದೆ. ಮತದಾನದ ವೇಳೆ ಮತದಾನದ ಪಾವಿತ್ರ್ಯತೆಯೊಂದಿಗೆ ಗೌಪ್ಯತೆಗೆ ಧಕ್ಕೆಯಾಗದಂತೆ ಕ್ರಮ ವಹಿಸಲಾಗುತ್ತದೆ. ಈ ದಿನಗಳಂದು ಮನೆಯಲ್ಲಿಯೇ ಇದ್ದು ಮತದಾನ ಮಾಡಬೇಕೆಂದು ಜಿಲ್ಲಾಧಿಕಾರಿ ಕೋರಿದ್ದಾರೆ.

**ಮನೆಯಲ್ಲಿಯೇ ಮತದಾನದ ವಿವರ :** ದಾವಣಗೆರೆ ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 12845 ಮತದಾರರಿದ್ದು, ಇದರಲ್ಲಿ ಮನೆಯಲ್ಲಿಯೇ ಮತದಾನ ಮಾಡಲು 1458 ಹಿರಿಯ ನಾಗರಿಕರು ಒಪ್ಪಿಗೆ ನೀಡಿದ್ದಾರೆ. ಮತ್ತು 22922 ವಿಶೇಷಚೇತನ ಮತದಾರರಲ್ಲಿ 804 ಮತದಾರರು ಮನೆಯಲ್ಲಿಯೇ ಮತದಾನ ಮಾಡಲು ಒಪ್ಪಿಗೆ ನೀಡಿದ್ದು ಇವರಿಗೆ ಮತದಾನ ಮಾಡಿಸಲಾಗುತ್ತದೆ. ಈಗಾಗಲೇ ಒಪ್ಪಿಗೆ ನೀಡಿದ ಮತದಾರರು ಮತಗಟ್ಟೆಯಲ್ಲಿ ಮತದಾನ ಮಾಡಲು ಅವಕಾಶ ಇರುವುದಿಲ್ಲ.

**ಮನೆಯಲ್ಲಿ ಮತದಾನದ ಕ್ಷೇತ್ರವಾರು ವಿವರ :** ಹಿರಿಯ ನಾಗರಿಕರು 85 ವರ್ಷ ಮೇಲ್ಪಟ್ಟು ಜಗಳೂರು 202, ಹರಪನಹಳ್ಳಿ 163, ಹರಿಹರ 123, ದಾವಣಗೆರೆ ಉತ್ತರ 264, ದಕ್ಷಿಣ 100, ಮಾಯಕೊಂಡ 16, ಚನ್ನಗಿರಿ 204, ಹೊನ್ನಾಳಿ 386 ಸೇರಿ 1458,

**ವಿಶೇಷಚೇತನರು :** ಜಗಳೂರು 119, ಹರಪನಹಳ್ಳಿ 75, ದಾವಣಗೆರೆ ಉತ್ತರ 112, ದಕ್ಷಿಣ 88, ಮಾಯಕೊಂಡ 6, ಚನ್ನಗಿರಿ 98, ಹೊನ್ನಾಳಿ 230 ಸೇರಿ ಒಟ್ಟು 804 ಮತದಾರರು ಮನೆಯಲ್ಲಿ ಮತದಾನ ಮಾಡಲು 12ಡಿ ರಲ್ಲಿ ಘೋಷಣೆ ಮಾಡಿಕೊಂಡಿದ್ದಾರೆ.

## ಅಕ್ರಮ ಮರಳು ಗಣಿಗಾರಿಕೆ ವಿರುದ್ಧ ದನಿ ಎತ್ತಿದ ಶಾಸಕ ಹರೀಶ್‌ಗೆ ಪ್ರಾಣ ಬೆದರಿಕೆ

ದಾವಣಗೆರೆ, ಏ.23- ಮರಳು ಗಣಿಗಾರಿಕೆ ಮಾಲೀಕರ ಸಹೋದರನೊಬ್ಬ ಹರಿಹರ ಶಾಸಕ ಬಿ.ಪಿ. ಹರೀಶ್ ಅವರಿಗೆ ಪ್ರಾಣ ಬೆದರಿಕೆ ಹಾಕಿದ್ದು, ಅವರನ್ನು ಬಂಧಿಸಬೇಕು ಹಾಗೂ ಶಾಸಕ ಹರೀಶ್ ಅವರಿಗೆ ಸೂಕ್ತ ಭದ್ರತೆ ಒದಗಿಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್ ಹೇಳಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಹರ ತಾಲ್ಲೂಕಿನ ಚಿಕ್ಕಬಿದರಿ ಗ್ರಾಮ ಮತ್ತು ಹರಪನಹಳ್ಳಿ ತಾಲ್ಲೂಕಿನ ವಟ್ಲಹಳ್ಳಿ ಗ್ರಾಮಗಳ ನಡುವೆ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯ ಸ್ಥಳಕ್ಕೆ ಬಿ.ಪಿ. ಹರೀಶ್ ಅವರು ಮಾಧ್ಯಮದವರನ್ನು ಕರೆದುಕೊಂಡು ಹೋಗಿ ತೋರಿಸಿದ್ದರ ಹಿನ್ನೆಲೆಯಲ್ಲಿ ಈ ಬೆದರಿಕೆ ಬಂದಿದೆ ಎಂದು ಹೇಳಿದರು.

ಹರೀಶ್ ಅವರು ಇಂದು ಬೆಳಿಗ್ಗೆ ವಾಯುವಿಹಾರ ಮುಗಿಸಿ ಸಿ.ಜಿ.ಆಸ್ಪತ್ರೆಯ ಎದುರಿನ ಕಾಫಿ ಬಾರ್ ಎದುರು ನಿಂತಿದ್ದಾಗ ಮರಳು ಗಣಿಗಾರಿಕೆ ಮಾಲೀಕರ ಸಹೋದರನೊಬ್ಬ ಧಮ್ಕಿ ಹಾಕಿದ್ದಾನೆ ಎಂದರು.

ಕಾನೂನುಬಾಹಿರವಾಗಿ ಮರಳು ಗಣಿಗಾರಿಕೆ ಮಾಡುವವರು ಎಂತಹ ದುಷ್ಕೃತ್ಯವನ್ನಾದರೂ ಎಸಗಬಲ್ಲರು ಎಂಬುದಕ್ಕೆ ಹಲವು ಉದಾಹರಣೆಗಳು ಇವೆ. ಆದ್ದರಿಂದ ಧಮ್ಕಿ ಹಾಕಿದವರನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನವರು ಸಂವಿಧಾನದ ಹೆಸರೇಳಿಕೊಂಡು ಹೊಟ್ಟೆಪಾಡಿನ ರಾಜಕಾರಣ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಂತಹ ಪ್ರಕರಣಗಳು ಎಗ್ಗಿಲ್ಲದೇ ನಡೆಯುತ್ತಿದ್ದು, ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಜಿಲ್ಲಾಡಳಿತ ಇದಕ್ಕೆ ಉತ್ತರಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಗಳಾದ ಧನಂಜಯ್ ಕಡ್ಲೇಬಾಳು, ಐರಣಿ ಅಣ್ಣೇಶ್, ಅನಿಲ್ ಕುಮಾರ್ ನಾಯಕ್, ರಾಜನಹಳ್ಳಿ ಶಿವಕುಮಾರ್, ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ವೀರೇಶ್ ಹನಗವಾಡಿ, ಎಚ್.ಎನ್. ಗುರುನಾಥ್, ಶ್ರೀನಿವಾಸ ದಾಸಕರಿಯಪ್ಪ, ಆರ್. ಎಲ್. ಶಿವಪ್ರಕಾಶ್, ಕುಂದುವಾಡ ಪ್ರಕಾಶ್, ಕುಂದುವಾಡ ಹನುಮಂತಪ್ಪ, ಕೊಳೇನಹಳ್ಳಿ ಬಿ.ಎಂ. ಸತೀಶ್ ಇದ್ದರು.

## ಪರಿಹಾರ ಕೊಡದೇ ರಾಜ್ಯಕ್ಕೆ ಬರಬೇಡಿ

**ಮೋದಿ ವಿರುದ್ಧ ಸಿಎಂ, ಸಚಿವರ ಪ್ರತಿಭಟನೆ**

ಬೆಂಗಳೂರು, ಏ. 23 - ಬರ ಪರಿಹಾರ ಹಣ ನೀಡದ ಕೇಂದ್ರದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಮಂತ್ರಿಮಂಡಲದ ಸದಸ್ಯರು ಇಂದಿಲ್ಲಿ ಸಾಂಕೇತಿಕ ಪ್ರತಿಭಟನೆ ನಡೆಸಿದ್ದಲ್ಲದೆ, ಕರ್ನಾಟಕಕ್ಕೆ ಹಣ ಬಿಡುಗಡೆ ಮಾಡದೇ ನೀವು ರಾಜ್ಯ ಪ್ರವೇಶ ಮಾಡಬೇಡಿ ಎಂದು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಷಾ ಹಾಗೂ ನಿರ್ಮಲಾ ಸೀತಾರಾಮನ್ ಅವರನ್ನು ಒತ್ತಾಯಿಸಿದ್ದಾರೆ.

ಸುಪ್ರೀಂ ಕೋರ್ಟ್ ಮಧ್ಯೆ ಪ್ರವೇಶಿಸಿದ ನಂತರ ಕೇಂದ್ರ ಸರ್ಕಾರ ರೈತರ ಬೆಳೆಗೆ ಪರಿಹಾರ ನೀಡುವುದಾಗಿ ಪ್ರಕಟಿಸಿದ ನಂತರವೂ ಮುಖ್ಯಮಂತ್ರಿ ಅವರು, ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಬಹುಭಾಗ ಬರದಿಂದ ತತ್ತರಿಸಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ, ಬರದಿಂದ 18,172 ಕೋಟಿ ರೂ. ಬೆಳೆ ಹಾಗೂ ಬರ ಪರಿಹಾರ ನೀಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಿದರೂ ಇದುವರೆಗೂ ಒಂದು ನಯಾಪೈಸೆ ಬಂದಿಲ್ಲ ಎಂದರು. ಕೇಂದ್ರದ ಮಲತಾಯಿ ಧೋರಣೆ ನಡುವೆಯೂ ನಾವು ಬರ ವನ್ನು ಸಮರ್ಥವಾಗಿ ಎದುರಿಸಿದ್ದೇವೆ, ಎಲ್ಲಿಯೂ ಕುಡಿಯುವ ನೀರು, ಮೇವಿಗೆ ತೊಂದರೆ ಆಗಿಲ್ಲ. 34 ಲಕ್ಷ ರೈತರಿಗೆ ತಲಾ 2,000 ರೂ. ವರೆಗೂ ಮೊದಲ ಹಂತದ ಪರಿಹಾರದ ಹಣವನ್ನು ನೀಡಿದ್ದೇವೆ. ಕಳೆದ ಏಳು ತಿಂಗಳ ಹಿಂದೆಯೇ ರಾಜ್ಯದ ಬರ ಪರಿಸ್ಥಿತಿಯನ್ನು ಕೇಂದ್ರದ ಗಮನಕ್ಕೆ ತರಲಾಗಿತ್ತು, ತದನಂತರ ಕೃಷಿ ಅಧಿಕಾರಿಗಳು ರಾಜ್ಯಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಿದ್ದಾರೆ, ಇಷ್ಟಾದರೂ ನಮಗೆ ಯಾವುದೇ ಹಣ ಬಿಡುಗಡೆ ಮಾಡಲಿಲ್ಲ ಎಂದರು.

## ಹರಿಹರ ಗ್ರಾಮೀಣದಲ್ಲಿ ಇಂದು ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಚಾರ



ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ಹರಿಹರ ಗ್ರಾಮೀಣ ಭಾಗದಲ್ಲಿ ಶಾಸಕ ಬಿ.ಪಿ.ಹರೀಶ್, ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಅಧ್ಯಕ್ಷತೆಯಲ್ಲಿ ಇಂದು ಮತ ಯಾಚನೆ ನಡೆಸಲಿದ್ದಾರೆ.

ಬೆಳಗ್ಗೆ 8 ಕ್ಕೆ ದೊಗ್ಗಳ್ಳಿ, 8.30 ಕ್ಕೆ ಕೊಂಡಜ್ಜಿ, 9ಕ್ಕೆ ಬುಳ್ಳಾಪುರ, 9.30 ಕ್ಕೆ ಕೆಂಚನಹಳ್ಳಿ, 10ಕ್ಕೆ ಹೊಟ್ಟಿಗೇನಹಳ್ಳಿ, 10.30ಕ್ಕೆ ಕುರುಬರ ಹಳ್ಳಿ, 11 ಕ್ಕೆ ಸಾರಥಿ, 11.30ಕ್ಕೆ ಚಿಕ್ಕಬಿದಿರೆ, ಮಧ್ಯಾಹ್ನ 12ಕ್ಕೆ ಪಾಮೇನಹಳ್ಳಿ, 12.30ಕ್ಕೆ ದೀಟೂರು, 1ಕ್ಕೆ ಗಂಗನರಸಿ, 1.30 ಕ್ಕೆ ಹನಗವಾಡಿ, 2ಕ್ಕೆ ಹರಗನಹಳ್ಳಿ, 2.30ಕ್ಕೆ ರಾಜನಹಳ್ಳಿ, 3ಕ್ಕೆ ತಿಮ್ಲಾಪುರ, 3.30 ಕ್ಕೆ ಬಿಳಸನೂರು, ಸಂಜೆ 4ಕ್ಕೆ ಹೊಸಹಳ್ಳಿ, 4.30 ಕ್ಕೆ ಕಮಲಾಪುರ, 5ಕ್ಕೆ ಶಿವನಹಳ್ಳಿ, 5.30 ಕ್ಕೆ ಹೊಳೆಸಿರಿಗೆರೆ, 6ಕ್ಕೆ ಕೆ.ಎನ್.ಹಳ್ಳಿ, 6.30 ಕ್ಕೆ ಯಲವಟ್ಟಿ, 7 ಕ್ಕೆ ಕುಂಬಳೂರು, 7.30 ಕ್ಕೆ ಕೊಮಾರನಹಳ್ಳಿ, 8ಕ್ಕೆ ಹಾಲಿವಾಣ, 8.30 ಕ್ಕೆ ಹರಳಹಳ್ಳಿ, 9 ಕ್ಕೆ ನಂದಿತಾವರೆ, 9.30 ಕ್ಕೆ ಕುಣೆಬೆಳಕೆರೆ, ರಾತ್ರಿ 10ಕ್ಕೆ ದೇವರಬೆಳಕರೆ ಗ್ರಾಮಗಳಲ್ಲಿ ಪ್ರಚಾರ ನಡೆಸಲಿದ್ದಾರೆ.

## ಸತ್ಯನಾರಾಯಣಪುರದಲ್ಲಿ ಶ್ರೀರಾಮ ದೇವಸ್ಥಾನ ಉದ್ಘಾಟನೆ

ದಾವಣಗೆರೆ, ಏ. 23- ಹರಿಹರ ತಾಲ್ಲೂಕು ಸತ್ಯನಾರಾಯಣಪುರ (ಕುಂದುವಾಡ ಕ್ಯಾಂಪ್)ದಲ್ಲಿ ನೂತನವಾಗಿ ಕಲ್ಲಿನಲ್ಲಿ ನಿರ್ಮಿಸಲಾಗಿರುವ ಶ್ರೀರಾಮ ದೇವಸ್ಥಾನ, ಶ್ರೀ ಸೀತಾರಾಮ ಲಕ್ಷ್ಮಣ, ಹನುಮಂತ ಸಮೇತ ಶ್ರೀ ಮಹಾಗಣಪತಿ, ಶ್ರೀ ಮಹಾಲಕ್ಷ್ಮಿ ವಿಗ್ರಹಗಳ ಪುನಃ ಪ್ರತಿಷ್ಠಾಪನಾ ಮಹೋತ್ಸವದ ಕಾರ್ಯಕ್ರಮಗಳು ಆರಂಭವಾಗಿವೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಶ್ರೀ ರಾಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಯು.ಸತ್ಯನಾರಾಯಣ ಅವರು, ಸುಮಾರು 1.50 ಕೋಟಿ ರೂ. ವೆಚ್ಚದಲ್ಲಿ ನೂತನ ದೇವಸ್ಥಾನ ನಿರ್ಮಿಸಲಾಗಿದೆ ಎಂದು ಹೇಳಿದರು. ಧಾರ್ಮಿಕ ಕಾರ್ಯಕ್ರಮಗಳು ನಿನ್ನೆ ಆರಂಭವಾಗಿದ್ದು, ನಾಡಿದ್ದು ದಿನಾಂಕ 26ರವರೆಗೆ ನಡೆಯಲಿವೆ. ಅಲ್ಲಿಯವರೆಗೂ ಅನ್ನ ಸಂತರ್ಪಣೆ ವ್ಯವಸ್ಥೆ ಇರಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಟ್ರಸ್ಟಿ ಜಿ.ಚಾಣಕ್ಯ, ಬಿ.ಭಾಸ್ಕರ್, ಪಿ.ವಿ.ಬಿ. ಸತ್ಯನಾರಾಯಣ, ವೈಟ್ಲಾ ತಾತಾರಾವ್, ಕಣ್ಣಾಳ್ ಅಂಜಿನಪ್ಪ, ಲಿಂಗರಾಜ್ ಇತರರಿದ್ದರು.


## ದಾಖಲಾತಿ ಪತ್ರಗಳು ಕಳೆದಿವೆ

ಶ್ರೀಮತಿ ಸೈಯದಾ ನಸ್ರೀನ್ ಉನ್ನೀಸಾ.ಟಿ.ಎಸ್. ಕೋಂ ಹೆಚ್. ಮಹ್ಮದ್ ರಫೀಕ್, ವಾಸ: ಡೋರ್ ನಂ.395ರ ಎದುರು ಮನೆ, ವಾಟರ್ ಟ್ಯಾಂಕ್ ಹಿಂಭಾಗ, ಎಸ್.ಎಂ.ಕೃಷ್ಣ ನಗರ, ದಾವಣಗೆರೆ. ನನ್ನ ಹೆಸರಿನ ದಾಖಲಾತಿಗಳಾದ, ದಿನಾಂಕ:05.02.2015 ರಂದು ದಾವಣಗೆರೆ ಹಿರಿಯ ಉಪನೋಂದಣಾಧಿಕಾರಿಗಳ ಕಛೇರಿಯ **1ನೇ ಪುಸ್ತಕದ ದಸ್ತಾವೇಜು ನಂ. ಡಿವಿಜಿ.1.17364/2014-15 ಸಿಡಿ ನಂ. ಡಿವಿಜಿಡಿ.372ನೇ ನಂಬರಾಗಿ** ನೋಂದಣಿಯಾಗಿರುವ ಕ್ರಯಪತ್ರದ ಮೂಲಕ ದಾವಣಗೆರೆ ಮಹಾನಗರಪಾಲಿಕೆ ವ್ಯಾಪ್ತಿಗೆ ಸೇರಿದ ದಾವಣಗೆರೆ ಸಿಟಿ, ಕೊಂಡಜ್ಜಿ ರಸ್ತೆ ಉತ್ತರ ಭಾಗದಲ್ಲಿ ಬರತಕ್ಕ ಸೈಟುಗಳ ಪೈಕಿ ಸೈಟ್ ನಂ. 44 ಅಳತೆ: 20 x 30 ಅಡಿ ಮತ್ತು ಸೈಟ್ ನಂ. 45 ಅಳತೆ; 20 x 30 ಅಡಿ ಉಳ್ಳ ಎರಡು ನಿವೇಶನಗಳನ್ನು ಶ್ರೀ ಎಸ್.ಪ್ರಭಾಕರ್ ಬಿನ್ ಸಾಳಂಕಿ ರಾಮರಾವ್ ಇವರಿಂದ ಕ್ರಯಪತ್ರದ ಮೂಲಕ ಖರೀದಿಸಿದ್ದು, ಸದರಿ ಖರೀದಿ ಸಮಯದಲ್ಲಿ ನಾನು ಖರೀದಿದಾರರಿಂದ **ದಿನಾಂಕ:29.05.2009ರಂದು ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ 4ನೇ ಪುಸ್ತಕದ ಸಿಡಿ ನಂ.ಡಿವಿಜಿಡಿ.110 ರಲ್ಲಿ 120/2009-10**ನೇ ನಂಬರಾಗಿ ರಿಜಿಸ್ಟರ್ ಆಗಿರುವ ಜನರಲ್ ಪವರ್ ಆಫ್ ಅಟಾರ್ನಿ ಪತ್ರ, **ದಿನಾಂಕ: 27.11.2005ರಂದು ದಾವಣಗೆರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ 1ನೇ ಪುಸ್ತಕದ ಸಿಡಿ ನಂ.ಡಿವಿಜಿಡಿ.23ರಲ್ಲಿ 08513/2004-05**ನೇ ನಂಬರಾಗಿ ರಿಜಿಸ್ಟರ್ ಆಗಿರುವ ಕ್ರಯಪತ್ರ, ದಿನಾಂಕ: 06.10.2008 ರಂದು ದಾವಣಗೆರೆ ಹಿರಿಯ ಉಪನೋಂದಣಾಧಿಕಾರಿಗಳ ಕಛೇರಿಯ **1ನೇ ಪುಸ್ತಕದ ದಸ್ತಾವೇಜು ನಂ. ಡಿವಿಜಿ.1.07067/2006-07 ಸಿಡಿ ನಂ.ಡಿವಿಜಿಡಿ.98ನೇದ್ದರ ಕ್ರಯದ ಕರಾರು ಪತ್ರದ ರದ್ದಿಯಾತಿ ಪತ್ರ, ದಿನಾಂಕ:17.05.1995 ರಂದು ನೋಂದಣಿಯಾದ ಕ್ರಯಪತ್ರ ಸಂಖ್ಯೆ:1401/1995-96ರ ಪ್ರತಿ, ದಾವಣಗೆರೆ ಸಬ್ ರಿಜಿಸ್ಟರ್ ಕಛೇರಿಯಲ್ಲಿ ದಿನಾಂಕ: 13.02.2006 ರಂದು ನೋಂದಣಿಯಾದ ಸಿಡಿ ನಂ.ಡಿವಿಜಿಡಿ.44 1ನೇ ಪುಸ್ತಕದ 9046/2005-06**ನೇ ನಂಬರಾಗಿರುವ ಕ್ರಯದ ಕರಾರು ನೋಂದಣಿ ಪತ್ರ, ಇ.ಸಿ. ಇವುಗಳ ಮೂಲಪ್ರತಿಗಳನ್ನು ಪಡೆದುಕೊಂಡಿದ್ದೆನು.

ಸದರಿ ದಾಖಲಾತಿ ಪತ್ರಗಳನ್ನು ದಿನಾಂಕ 05.04.2024ರಂದು ದಾವಣಗೆರೆ ಸಿಟಿ ಬೂದಿಹಾಳು ರಿಂಗ್ ರಸ್ತೆಯಲ್ಲಿ ಹೋಗುತ್ತಿದ್ದ ಸಮಯದಲ್ಲಿ ಆಕಸ್ಮಿಕವಾಗಿ ಕಳೆದುಹೋಗಿವೆ. ನಾನು ಮೇಲೆ ತಿಳಿಸಿದ ದಾಖಲೆ ಪತ್ರಗಳನ್ನು ಯಾವುದೇ ಬ್ಯಾಂಕ್‌ಗಳು, ಸೊಸೈಟಿಗಳು ಮತ್ತು ಹಣಕಾಸು ಸಂಸ್ಥೆಗಳಲ್ಲಿ ಸಾಲವನ್ನು ಪಡೆಯಲು ಠೇವಣಿ ಮಾಡಿರುವುದಿಲ್ಲ. ಸದರಿ ದಾಖಲಾತಿ ಪತ್ರಗಳು ಯಾರಿಗಾದರೂ ದೊರಕಿದಲ್ಲಿ ಮೇಲ್ಕಂಡ ವಿಳಾಸಕ್ಕೆ ಅಥವಾ ದೂರವಾಣಿಗೆ ಸಂಪರ್ಕಿಸಲು ಕೋರಿದೆ.

**ಹೆಚ್. ಮಹ್ಮದ್ ರಫೀಕ್, ಮೊ. : 9686587059 ಸಹಿ/- ಸೈಯದಾ ನಸ್ರೀನ್ ಉನ್ನೀಸಾ. ಟಿ.ಎಸ್.**


## ದುಡ್ಡು ಕೊಟ್ಟು ಓಟು ಪಡೆಯುವ ಪದ್ಧತಿ ನಿರ್ಮೂಲನೆ ಆಗಬೇಕು

### ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಪಕ್ಷೇತರ ಅಭ್ಯರ್ಥಿ ಜಿ.ಬಿ.ವಿನಯಕುಮಾರ್



ದಾವಣಗೆರೆ,ಏ.23- ನಾನು ಗೆದ್ದರೆ, ಪ್ರಜಾಪ್ರಭುತ್ವ ಉಳಿಸಲು ಹೋರಾಟ ಮಾಡಿದವರಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಸ್ವಾಭಿಮಾನದ ಚುನಾವಣೆ ಮಾಡೋಣ. ರಾಜಕಾರಣದಲ್ಲಿ ದುಡ್ಡು ಕೊಟ್ಟು ಓಟು ಪಡೆಯುವ ಪದ್ಧತಿ ನಿರ್ಮೂಲನೆ ಆಗಬೇಕು ಆಗ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಹೇಳಿದರು.

ನಗರದ ತಮ್ಮ ಗೃಹ ಕಚೇರಿಯಲ್ಲಿ ಚುನಾವಣಾ ಸಿದ್ಧತೆ ಕುರಿತಂತೆ ಇಂದು ನಡೆದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಸಿಲಿಂಡರ್ ಗುರುತು ಸಿಕ್ಕ ಹಿನ್ನೆಲೆಯಲ್ಲಿ ಮತದಾರರ ಮನವೊಲಿಸಲು ಯಾವೆಲ್ಲಾ ಯೋಜನೆ ಹಾಕಿಕೊಳ್ಳಬೇಕು, ಪ್ರಚಾರದ ವೈಖರಿ ಹೇಗಿರಬೇಕು, ಚಿಹ್ನೆ ಕುರಿತಂತೆ ಹೇಗೆ ಜಾಗೃತಿ ಮೂಡಿಸಬೇಕು. ಜನರಲ್ಲಿ ಜಾಗೃತಿ ಮೂಡಿಸಲು ಯಾವ ರೀತಿ ಶ್ರಮಿಸಬೇಕು, ಮನಮುಟ್ಟುವ ರೀತಿಯಲ್ಲಿ ತಿಳಿಸಿಕೊಡುವ ಕುರಿತಂತೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

ರಾಜಕಾರಣದಲ್ಲಿ ಬದಲಾವಣೆ ಗಾಳಿ ಬೀಸುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ದೊಡ್ಡ ಮುಖಂಡರು ಯಾರ ಮನೆಗೆ ಹೋಗಿ ಸೇರುತ್ತಾರೆ ಎಂಬುದು ಮುಖ್ಯವಲ್ಲ, ಯಾರ ಪರ ಒಲವಿದೆ ಎನ್ನುವುದು ಮುಖ್ಯ ಎಂದು ತಿಳಿಸಿದರು.

ನೀವೆಲ್ಲಾ ಬಹಿರಂಗವಾಗಿಯೇ ಬಂದಿದ್ದೀರಾ. ಇಲ್ಲಿಗೆ ಬರದೇ ಕೆಲಸ ಮಾಡುವ ಮುಖಂಡರು ನನ್ನ ಪರವಾಗಿ ಕೆಲಸ ಮಾಡುತ್ತಾರೆ. ಶಾಲು ಹಾಕಿಸಿಕೊಂಡು ಹೋದವರು ನನ್ನ ಪರ ಇದ್ದಾರೆ. ಟಿಕೆಟ್ ತಂದಿರುವ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ಬಗ್ಗೆ ಶೇ. 99 ರಷ್ಟು ಜನರಿಗೆ ಇಷ್ಟವಿಲ್ಲ. ತತ್ವ, ಸಿದ್ಧಾಂತಕ್ಕೆ ಒಪ್ಪಿದವರು ಅನಿವಾರ್ಯವಾಗಿ ಕೆಲಸ ಮಾಡುತ್ತಿದ್ದಾರೆ. ಅವರೂ ಬದಲಾವಣೆ ಬಯಸಿದ್ದಾರೆ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಮಟ್ಟದಿಂದ ಹಿಡಿದು ಲೋಕಸಭೆ ವರೆಗೆ ನಾನು ನಿಮ್ಮ ಪರವಾಗಿದ್ದೇನೆ. ಯಾರೂ ವಿಚಲಿತರಾಗಬೇಡಿ. ಏನೇ ತೊಂದರೆ ಬಂದರೂ ಎದುರಿಸೋಣ. ಈ ಚುನಾವಣೆಯಲ್ಲಿ ಸೋಲಲಿ, ಗೆಲ್ಲಲಿ ನಿಮ್ಮ ಜೊತೆ ಇರುತ್ತೇನೆ ಎಂದು ವಿನಯ್ ಕುಮಾರ್ ತಿಳಿಸಿದರು.

## ಜಗಳೂರಿನಲ್ಲಿಂದು ವಿನಯ್ ಪ್ರಚಾರ



ಲೋಕಸಭೆ ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಅವರ ಅಭಿಮಾನಿಗಳು ಜಗಳೂರಿನಲ್ಲಿ ಇಂದು ಕಾಲ್ನಡಿಗೆ ಜಾಥಾ ಆಯೋಜಿಸಿದ್ದಾರೆ. ಜಗಳೂರಿನ ಈಶ್ವರ ದೇವಸ್ಥಾನದಿಂದ ಮಧ್ಯಾಹ್ನ 2ಕ್ಕೆ ಜಾಥಾ ಪ್ರಾರಂಭಗೊಂಡು, ಸರ್ಕಾರಿ ಆಸ್ಪತ್ರೆ ಹಾಗೂ ಮಲೇನಹಳ್ಳಿ ವೃತ್ತದ ಮೂಲಕ ಜಾಥಾ ಹೊರಟು ಮಾರ್ಗ ಮಧ್ಯೆ ಅಂಬೇಡ್ಕರ್ ವೃತ್ತದಲ್ಲಿನ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬಳಿಕ ತರಳಬಾಳು ಕಲ್ಯಾಣ ಮಂಟಪ ತಲುಪಿ ಜಾಥಾ ಕೊನೆಗೊಳ್ಳುತ್ತದೆ.

# ಪತಂಜಲಿ ಆಯುರ್ವೇದ ಪ್ರಕರಣ

## ಜಾಹೀರಾತುಗಳ ಬಗ್ಗೆ ಸುಪ್ರೀಂ ಕಠಿಣ ನಿಲುವು



ನವದೆಹಲಿ, ಏ. 23 – ಪತಂಜಲಿ ಆಯುರ್ವೇದ ಪ್ರಕರಣದ ವ್ಯಾಪ್ತಿಯನ್ನು ಸುಪ್ರೀಂ ಕೋರ್ಟ್ ವಿಸ್ತರಿಸಿದ್ದು, ಎಫ್.ಎಂ.ಸಿ.ಜಿ. ಉದ್ಯಮಗಳು ನೀಡುವ ತಪ್ಪು ದಾರಿಗೆಳೆಯುವ ಜಾಹೀರಾತುಗಳ ಬಗ್ಗೆ ಕಠಿಣ ನಿಲುವು ತಳೆದಿದೆ.

ಈ ರೀತಿಯ ತಪ್ಪು ದಾರಿಗೆಳೆಯುವ ಜಾಹೀರಾತುಗಳ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಕೇಂದ್ರದ ಮೂವರು ಸಚಿವರು ಮಾಹಿತಿ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಯೋಗ ಗುರು ಬಾಬಾ ರಾಮದೇವ್ ಹಾಗೂ ಪತಂಜಲಿ ಆಯುರ್ವೇದದ ಬಾಲಕೃಷ್ಣ ವಿರುದ್ಧ ಅನುಚಿತ ಜಾಹೀರಾತು ಪ್ರಕಟಣೆಯ ಆರೋಪದ ಬಗ್ಗೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಈ ಬಗ್ಗೆ ಉಭಯರು 67 ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವ ಮೂಲಕ ಬಹಿರಂಗ ಕ್ಷಮೆ ಯಾಚಿಸಿದ್ದಾರೆ. ಈ ಬಗ್ಗೆ ಹೆಚ್ಚುವರಿ ಜಾಹೀರಾತು ಪ್ರಕಟಿಸಲು ಸಿದ್ಧವಿರುವುದಾಗಿಯೂ ಹೇಳಿದ್ದಾರೆ.

ತಪ್ಪು ದಾರಿಗೆಳೆಯುವ ಜಾಹೀರಾತಿನ ವಿಷಯ ಕೇವಲ ಪತಂಜಲಿ ಆಯುರ್ವೇದಕ್ಕೆ ಸೀಮಿತವಾಗಿಲ್ಲ. ಗ್ರಾಹಕರ ಸರಕುಗಳನ್ನು ಉತ್ಪಾದಿಸುವ ಎಲ್ಲಾ ಎಫ್.ಎಂ.ಸಿ.ಜಿ. ಉದ್ಯಮಗಳಿಗೆ ಸಂಬಂಧಿಸಿದ್ದಾಗಿದೆ. ಇವರು ಜನರನ್ನು ತಪ್ಪು ದಾರಿಗೆ ಎಳೆಯುತ್ತಾರೆ. ಇದರಿಂದಾಗಿ ಶಿಶುಗಳು, ಮಕ್ಕಳು ಹಾಗೂ ಹಿರಿಯ ನಾಗರಿಕರ ಮೇಲೆ ಪರಿಣಾಮವಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಧಾರ್ಮಿಕ ಕ್ಷೇತ್ರಗಳು ಪ್ರವಾಸಿ ತಾಣ: ಡಾ. ಪ್ರಭಾ ಭರವಸೆ

ಹೊನ್ನಾಳಿ,ಏ.23- ಎರಡನೇ ಮಂತ್ರಾಲಯ ಎಂದೇ ಪ್ರಸಿದ್ದ ಪಡೆದಿರುವ ಹೊನ್ನಾಳಿಯ ಪುಣ್ಯ ಕ್ಷೇತ್ರ ರಾಘವೇಂದ್ರ ಸ್ವಾಮಿ ಬೃಂದಾವನ ಹಾಗೂ ತೀರ್ಥರಾಮೇಶ್ವರ ಕ್ಷೇತ್ರಗಳು ಸೇರಿದಂತೆ ತಾಲ್ಲೂಕಿನ ಐತಿಹಾಸಿಕ ಕ್ಷೇತ್ರಗಳನ್ನು ಪ್ರವಾಸಿ ತಾಣಗಳನ್ನಾಗಿಸಲಾಗುವುದು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ತಾಲ್ಲೂಕಿನ ತೀರ್ಥರಾಮೇಶ್ವರ ಗ್ರಾಮದಿಂದ ಇಂದು ಚುನಾವಣಾ ಪ್ರಚಾರ ಕಾರ್ಯ ಆರಂಭಿಸಿದ ಪ್ರಭಾ ಮಲ್ಲಿಕಾರ್ಜುನ್ ಅವರು ಬೆಳಗುತ್ತಿ ಮಲ್ಲಿಗೇನಹಳ್ಳಿ, ರಾಮೇಶ್ವರ, ಹರಗನಹಾಳು, ಗುಡ್ಡಹಳ್ಳಿ, ಜೀನಹಳ್ಳಿ, ಕತ್ತಿಗೆ, ಕೆಂಚಿಕೊಪ್ಪ, ಚಿನ್ನಿಕಟ್ಟೆ, ಸವಳಂಗ, ಸೋಗಿಲು ಚಟ್ನಹಳ್ಳಿ, ಫಲವನಹಳ್ಳಿ, ಮುಸ್ಸೇನಹಾಳು, ಕುಂಕುವ, ವಡೆಯರಹತ್ತೂರು, ಗಂಗನಕೋಟೆ, ಬಸವನಹಳ್ಳಿ, ಹರಳಹಳ್ಳಿ, ಅರಬಗಟ್ಟೆ, ಮಾದನಬಾವಿ, ಸೊರಟೂರು ಗ್ರಾಮಗಳಲ್ಲಿ ಪ್ರಚಾರ ನಡೆಸಿ ಮತದಾರರನ್ನುದ್ದೇಶಿಸಿ ಮಾತನಾಡಿದರು.

ಹೊನ್ನಾಳಿ ತಾಲ್ಲೂಕಿನಲ್ಲಿ ಅನೇಕ ಐತಿಹಾಸಿಕ ಸ್ಥಳಗಳಿದ್ದು, ಇಂತಹ ಸ್ಥಳಗಳನ್ನು ಕೇಂದ್ರದಿಂದ ಹೆಚ್ಚಿನ ಅನುದಾನ ತಂದು ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು ಎಂದರು.

ಕೇಂದ್ರದಿಂದ ಪ್ರತಿ ಕ್ಷೇತ್ರಕ್ಕೆ ವಸತಿಯುತ ಶಾಲೆಗಳು ಮಂಜೂರಾಗಲಿದ್ದು, ಅಂತಹ ವಸತಿಯುತ ಶಾಲಾ-ಕಾಲೇಜುಗಳನ್ನು ಈ ಕ್ಷೇತ್ರಕ್ಕೆ ತಂದು ಈ ಭಾಗದ ಮಕ್ಕಳಿಗೆ ಹೆಚ್ಚಿನ ವಿದ್ಯಾಭ್ಯಾಸ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ತರುವ ಭರವಸೆ ನೀಡಿತ್ತು. ಅದರಂತೆ ಸರ್ಕಾರ ಬಂದ ತಕ್ಷಣ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಇಂದು ಹೊನ್ನಾಳಿ ವಿಧಾನಸಭಾ ಕ್ಷೇತ್ರವೊಂದಕ್ಕೆ ಮಾರ್ಚ್ ಅಂತ್ಯಕ್ಕೆ ಸುಮಾರು ರೂ.128 ಕೋಟಿಯಷ್ಟು ಹಣವನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂದರು.



ಇನ್ನು ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 'ಪಂಚ ನ್ಯಾಯ ಪಚ್ಚೀಸ್ ಗ್ಯಾರೆಂಟಿ' ಭರವಸೆಗಳನ್ನು ನೀಡಲಾಗಿದ್ದು, ಯುವ ನ್ಯಾಯದಡಿ ಯುವಕರಿಗೆ ಉದ್ಯೋಗ, ಮಹಿಳಾ ನ್ಯಾಯದಡಿ ಪ್ರತಿ ಮಹಿಳೆಗೆ 1 ಲಕ್ಷ ರೂ., ರೈತ ನ್ಯಾಯದಡಿ ಸ್ವಾಮಿನಾಥನ್ ಆಯೋಗ ಜಾರಿಗೊಳಿಸುವುದು,

### ಹೊನ್ನಾಳಿ ಕ್ಷೇತ್ರದಲ್ಲಿ ಪ್ರಭಾ ಮಲ್ಲಿಕಾರ್ಜುನ್ ಮತ ಯಾಚನೆ

ನರೇಗಾ ಕೂಲಿ ಹಣವನ್ನು ರೂ. 400 ಕ್ಕೆ ಹೆಚ್ಚಿಸಲಾಗುವುದು ಸೇರಿದಂತೆ ಹಲವು ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಘೋಷಿಸಲಾಗಿದ್ದು, ಅದರಂತೆ ನಾವುಗಳು ಜಾರಿಗೆ ತರುತ್ತೇವೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಡಿ.ಜಿ.ಶಾಂತನ ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಶಿವಯೋಗಿ, ನಾಗಪ್ಪ, ಡಿ.ಜಿ.ವಿಶ್ವನಾಥ್, ಮುಖಂಡರಾದ ಗದಿಗೇಶ್, ಬಿ. ಸಿದ್ದಪ್ಪ, ಉಮಾಪತಿ, ಚಂದ್ರಶೇಖರಪ್ಪ, ಮಧುಗೌಡ, ರಾಘವೇಂದ್ರ ನಾಯ್ಕ, ಜಯದೇವನಾಯ್ಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ವಿದ್ಯಾಪೋಷಕ ಸಂಸ್ಥೆಯ ವಿದ್ಯಾರ್ಥಿಗಳಿಗೆ ಡಿಸ್ಟಿಂಕ್ಷನ್

ದಾವಣಗೆರೆ, ಏ.23- ಕಳೆದ ಮಾರ್ಚ್ ತಿಂಗಳಿನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿದ್ಯಾಪೋಷಕ ಸಂಸ್ಥೆಯ 12 ವಿದ್ಯಾರ್ಥಿಗಳು ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ಎಂ. ರೇಷ್ಮಾ ಬಾನು (ಶೇ.98.16), ಸಾನಿಯಾ ಮಿಥ್ಯೆಗಾರ್ (ಶೇ.97), ಸಾನಿಯಾ ಮದ್ದೂರು (ಶೇ.96.33), ಟಿ.ಎನ್ ಲತಾ (ಶೇ.93.16), ಸಿ. ಜಯಲಕ್ಷ್ಮಿ (ಶೇ.92.66), ರಂಜಿತಾ (ಶೇ.92.16), ಎಚ್. ಪ್ರಶಾಂತ್ (ಶೇ.89.83), ಚಂದನಾ (ಶೇ.89.16), ಭಾವನಾ ಸುಣಗಾರ್ (ಶೇ.88.33), ಡಿ.ಯು. ಚಂದನಾ (ಶೇ.86.23), ಪಿ. ತನುಶ್ರೀ (ಶೇ.86.13) ಮತ್ತು ಪೂಜಾ ಹಡಪದ್ (ಶೇ.85) ಅಂಕಗಳನ್ನು ಗಳಿಸಿದ್ದಾರೆ.

## ನಗರದಲ್ಲಿ ಇಂದು ಚಿತ್ರಕಲಾ ಸ್ಪರ್ಧೆ

ಮತದಾರರ ಜಾಗೃತಿಗೆ ಇಂದು ಬೆಳಿಗ್ಗೆ 10 ಗಂಟೆಗೆ ಸಿ.ಜಿ. ಆಸ್ಪತ್ರೆ ಹತ್ತಿರ, ವಿಶ್ವೇಶ್ವರಯ್ಯ ಪಾರ್ಕ್‌ನಲ್ಲಿ ಇಂದು ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳು ಹಾಗೂ ಚಿತ್ರಕಲಾ ಶಿಕ್ಷಕರು ಭಾಗವಹಿಸಬಹುದು ಎಂದು ಡಯಟ್ ಪ್ರಾಂಶುಪಾಲರಾದ ಗೀತಾ ತಿಳಿಸಿದ್ದಾರೆ.

# ಬಂಡವಾಳಶಾಹಿ ಪರ ಬಿಜೆಪಿ ಸರ್ಕಾರ : ಪ್ರಿಯಾಂಕ ತರಾಟೆ



ಬೆಂಗಳೂರು, ಏ. 23 - ಬಂಡವಾಳಶಾಹಿ ಪರ ಇರುವ ಬಿಜೆಪಿ ಆಡಳಿತವನ್ನು ಕಿತ್ತೊಗೆದು ರೈತರು, ಜನ ಸಾಮಾನ್ಯರ ಪರವಾದ ಕಾಂಗ್ರೆಸ್ ಬೆಂಬಲಿಸುವಂತೆ ಪಕ್ಷದ ನಾಯಕಿ ಪ್ರಿಯಾಂಕ ಗಾಂಧಿ ಇಂದಿಲ್ಲಿ ಕರೆ ನೀಡಿದ್ದಾರೆ.

ಬೆಂಗಳೂರು ಮತ್ತು ಚಿತ್ರದುರ್ಗದಲ್ಲಿ ಪ್ರತ್ಯೇಕವಾಗಿ ಸಾರ್ವಜನಿಕ ಸಮಾವೇಶ ಹಾಗೂ ರೋಡ್ ಶೋ ನಡೆಸಿ, ಪಕ್ಷದ ಅಭ್ಯರ್ಥಿಗಳ ಪರ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರವನ್ನು ತಮ್ಮ ಭಾಷಣದುದ್ದಕ್ಕೂ ತರಾಟೆಗೆ ತೆಗೆದುಕೊಂಡರು.

ಭ್ರಷ್ಟಾಚಾರ ನಿಗ್ರಹದ ಹೆಸರಿನಲ್ಲಿ ಪ್ರತಿಪಕ್ಷಗಳನ್ನು ದಮನ ಮಾಡಿ ಬಂಡವಾಳಶಾಹಿಗಳಿಗೆ ಹಾಸುಗಂಬಳಿ ಹಾಕಿ ರೈತರನ್ನು ಕಡೆಗಣಿಸುತ್ತಿದ್ದಾರೆ.

ಇವರ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತರು ಮತ್ತು ಜನಸಾಮಾನ್ಯರ ಸ್ಥಿತಿ ಚಿಂತಾಜನಕವಾಗಿದೆ, ಅದರಲ್ಲೂ ಕೃಷಿಕ ಸಾಲದ ಸುಳಿಗೆ ಸಿಲುಕಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ ಎಂದು ಹೇಳಿದರು.

ಇಂತಹ ಕ್ಲಿಷ್ಟ ಸ್ಥಿತಿಯಲ್ಲೂ ಕೃಷಿ ಸಾಲ ಮನ್ನಾ ಮಾಡುವ ಸೌಜನ್ಯವನ್ನು ಪ್ರಧಾನಿ ತೋರಿಲ್ಲ. ಅದರ ಬದಲು ತಮ್ಮ ಸ್ನೇಹಿತರು ಹಾಗೂ ಬಂಡವಾಳಶಾಹಿಗಳ ಲಕ್ಷಾಂತರ ಕೋಟಿ ರೂ.ಗಳನ್ನು ಮನ್ನಾ ಮಾಡಿ ಜನಸಾಮಾನ್ಯರನ್ನು ತುಳಿಯುತ್ತಿದ್ದಾರೆ ಎಂದು ಪ್ರಿಯಾಂಕಾ ಟೀಕಿಸಿದರು.

ರೈತರ ಶ್ರಮಕ್ಕೆ ಈ ಸರ್ಕಾರದಲ್ಲಿ ಬೆಲೆ ಸಿಗುತ್ತಿಲ್ಲ, ಅವರು ಬೆಳೆದ ಬೆಳೆಗೆ ಬೆಲೆ ಇಲ್ಲ, ಆದರೆ ಮಾರುಕಟ್ಟೆಯಲ್ಲಿ ದಿನ ಬಳಕೆ ವಸ್ತುಗಳ ದರ ಗಗನ ಮುಟ್ಟಿವೆ, ಇದು ಇವರ ಸಾಧನೆ ಎಂದು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್ ನುಡಿದಂತೆ ನಡೆಯುತ್ತದೆ, ಈಗಾಗಲೇ ಕರ್ನಾಟಕದಲ್ಲಿ ನಿಮಗೆ ಅನುಭವವಾಗಿದೆ, ರಾಷ್ಟ್ರದಲ್ಲಿ ನಮ್ಮನ್ನು ಅಧಿಕಾರಕ್ಕೆ ತಂದರೆ ಮೊದಲು ಕೃಷಿ ಸಾಲ ಮನ್ನಾ ಮಾಡಿ ರೈತರ ಬದುಕನ್ನು ಹಸನು ಮಾಡುತ್ತೇವೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿ ಇಡೀ ದೇಶದ ರೈತರ 76 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದರು ಎಂದರು.

ಮೋದಿ ಪ್ರಧಾನಿಯಾಗಿ ಅತ್ಯಂತ ಶ್ರೀಮಂತರ 16 ಲಕ್ಷ ಕೋಟಿ ರೂ. ಸಾಲ ಮನ್ನಾ ಮಾಡಿದರು. ಈಗ ಹೇಳಿ ಮೋದಿ ಯಾರ ಪರ? ಎಂದು ಪ್ರಶ್ನಿಸಿದರು.

ಮೋದಿ ಹತ್ತು ವರ್ಷ ಪ್ರಧಾನಿಯಾಗಿ ಭಾರತೀಯರಲ್ಲಿ ಭ್ರಮೆ ಹುಟ್ಟಿಸಿದ್ದು ಬಿಟ್ಟರೆ ಅಭಿವೃದ್ಧಿಯಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ, ಪ್ರತೀ ಬಾರಿ ಭಾರತೀಯರನ್ನು ನಂಬಿಸಿ ಮೋಸ ಮಾಡೋದು ಮೋದಿಯವರಿಗೆ ರೂಢಿಯಾಗಿದೆ ಎಂದರು.

ರೈತರ ಆದಾಯ ದುಪ್ಪಟ್ಟು ಮಾಡ್ತೀವಿ ಅಂದೋರು ರೈತರ ಖರ್ಚು ಮೂರು ಪಟ್ಟು ಮಾಡಿಟ್ಟಿದ್ದಾರೆ.

ಮೋದಿ ಬಂದ ಮೇಲೆ ಜನ ಸಾಮಾನ್ಯರ, ಮಧ್ಯಮ ವರ್ಗದವರ ಮೇಲೆ ತೆರಿಗೆ ಭಾರ ಹೆಚ್ಚಾಯಿತು. ಉದ್ಯಮಿಗಳ ತೆರಿಗೆ ಭಾರ ಕಡಿಮೆ ಆಯಿತು. ಆದ್ದರಿಂದ ಮೋದಿ ಜನದ್ರೋಹಿ ತಾನೇ ಎಂದು ಪ್ರಶ್ನಿಸಿದರು.

ಹೀಗೆ ಮೋದಿಯವರ ವೈಫಲ್ಯಗಳನ್ನು ಪಟ್ಟಿ ಮಾಡುತ್ತಾ ಹೋದರೆ ಹನುಮಂತನ ಬಾಲದಂತೆ ಬೆಳೆಯುತ್ತದೆ ಎಂದರು.

### ಸೋನಿಯಾ ಗಾಂಧಿ ದೇಶಕ್ಕಾಗಿ ಮಂಗಳಸೂತ್ರ ತ್ಯಾಗ ಮಾಡಿದ್ದಾರೆ

ಬೆಂಗಳೂರು, ಏ. 23 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಸ್ತಿ ಹಂಚಿಕೆ ಹೇಳಿಕೆಗೆ ತಿರುಗೇಟು ನೀಡಿರುವ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ, ತನ್ನ ತಾಯಿ ಸೋನಿಯಾ ಗಾಂಧಿ ದೇಶಕ್ಕಾಗಿ ಮಂಗಳಸೂತ್ರ ತ್ಯಾಗ ಮಾಡಿದ್ದಾರೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷ ನಿಮ್ಮ ಮಂಗಳಸೂತ್ರ ಕಸಿಯಲು ಯತ್ನಿಸುತ್ತಿದೆ ಎಂದು ಎರಡು ದಿನಗಳ ಹಿಂದೆ ಭಾಷಣ ಮಾಡಲಾಗಿದೆ. ಈ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ 55 ವರ್ಷಗಳ ಕಾಲ ಕಾಂಗ್ರೆಸ್ ಆಡಳಿತ ನಡೆಸಿದೆ. ಕಾಂಗ್ರೆಸ್ ಎಂದಾದರೂ ನಿಮ್ಮ ಬಂಗಾರ, ಇಲ್ಲವೇ ಮಂಗಳಸೂತ್ರ ಕಸಿದಿದೆಯಾ? ಎಂದು ಚುನಾವಣಾ ಸಮಾವೇಶದಲ್ಲಿ ಮಾತ ನಾಡಿದ ಪ್ರಿಯಾಂಕ ಪ್ರಶ್ನಿಸಿದ್ದಾರೆ. ಯುದ್ಧ ಸಂಭವಿಸಿದಾಗ ಮಾಜಿ ಪ್ರಧಾನಿ ಹಾಗೂ ನನ್ನ ಅಜ್ಜಿ ಇಂದಿರಾ ಗಾಂಧಿ ತಮ್ಮ ಬಂಗಾರ ದಾನ ಮಾಡಿದ್ದರು. ನನ್ನ ತಾಯಿ ದೇಶಕ್ಕಾಗಿ ಮಂಗಳಸೂತ್ರ ತ್ಯಾಗ ಮಾಡಿದ್ದರು ಎಂದಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮಂಗಳಸೂತ್ರದ ಪ್ರಾಮುಖ್ಯತೆಯ ಅರಿವಿದ್ದರೆ ಇಂತಹ ಮಾತನಾಡುತ್ತಿರಲಿಲ್ಲ ಎಂದೂ ಅವರು ಹೇಳಿದ್ದಾರೆ.

## ಮೋದಿ 'ವಿಷ ಗುರು' : ಜೈರಾಮ್ ರಮೇಶ್

ಜೈಪುರ, ಏ. 23 – ಪ್ರಧಾನ ಮಂತ್ರಿ ನರೇಂದ್ರ ಮೋದಿ 'ವಿಷ ಗುರು' ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಕಿಡಿ ಕಾರಿದ್ದಾರೆ.

ಮಂಗಳಸೂತ್ರವನ್ನು ಎಂದೂ ಗೌರವಿಸದ ಮೋದಿ, ಈಗ ಕಾಂಗ್ರೆಸ್ ಪಕ್ಷ ಮಹಿಳೆಯರ ಮಂಗಳಸೂತ್ರ ಕಸಿಯಲಿದೆ ಎಂಬ ಮಾತುಗಳನ್ನು ಆಡುತ್ತಿದ್ದಾರೆ ಎಂದವರು ಟೀಕಿಸಿದ್ದಾರೆ. ಪ್ರಧಾನ ಮಂತ್ರಿ ನಮ್ಮ ಪ್ರಣಾಳಿಕೆಯ ಬಗ್ಗೆ ಬೇರೆ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಅವರು ಹಿನ್ನಡೆ ಕಂಡಿರುವ ಕಾರಣ, ವಿಭಜನೆಯ ಹಾಗೂ ಧೃವೀಕರಣದ ಮಾತನಾಡುತ್ತಿದ್ದಾರೆ ಎಂದೂ ರಮೇಶ್ ಆರೋಪಿಸಿದ್ದಾರೆ.

# ಕೊಮಾರನಹಳ್ಳಿಯಲ್ಲಿ ಸಂಭ್ರಮದ ಬ್ರಹ್ಮ ರಥೋತ್ಸವ



ಮಲೇಬೆನ್ನೂರು, ಏ.23- ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಬ್ರಹ್ಮರಥೋತ್ಸವವು ಮಂಗಳವಾರ ಮಧ್ಯಾಹ್ನ ಅಪಾರ ಭಕ್ತರ ಸಮ್ಮುಖದಲ್ಲಿ ವಾದ್ಯ ಮೇಳಗಳೊಂದಿಗೆ ಸಂಭ್ರಮದಿಂದ ಜರುಗಿತು. ರಥ ಪೂಜೆ ನಂತರ ರಥದಲ್ಲಿ ಶ್ರೀ ರಂಗನಾಥ ಸ್ವಾಮಿ ಮೂರ್ತಿ ಇಟ್ಟು ಪೂಜೆ ಸಲ್ಲಿಸಿದ ಬಳಿಕ ಉಪ ತಹಸೀಲ್ದಾರ್ ಆರ್. ರವಿ ಅವರು ತೇರಿನ ಗಾಲಿಗೆ ಕಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಿದರು. ನಂತರ ಭಕ್ತರು ಹಾಗೂ ಗ್ರಾಮಸ್ಥರು ಸೇರಿ ರಥವನ್ನು ಎಳೆದು ಸಂಭ್ರಮಿಸಿದರು. ರಥೋತ್ಸವದ ವೇಳೆ ಭಕ್ತರು ರಥದ ಮೇಲೆ ಬಾಳೆ ಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವದ ನಂತರ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ನಡೆಯಿತು. ಸಂಜೆ ಗ್ರಾಮಸ್ಥರು ಸಂಪ್ರದಾಯದಂತೆ ಪುನಃ ರಥವನ್ನು ಎಳೆದರು.

## ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್‌ಗೆ ಜೈಲಿನಲ್ಲಿ ಇನ್ಸುಲಿನ್



ನವದೆಹಲಿ, ಏ. 23 – ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ತಿಹಾರ್ ಜೈಲಿನಲ್ಲಿ ಕಡಿಮೆ ಪ್ರಮಾಣದ ಇನ್ಸುಲಿನ್ ಔಷಧಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎಐಐಎಂಎಸ್ ವೈದ್ಯರ ಸಲಹೆಯ ಮೇರೆಗೆ 2 ಯುನಿಟ್ ಕಡಿಮೆ ಪ್ರಮಾಣದ ಇನ್ಸುಲಿನ್ ನೀಡಲಾಗಿದೆ. ಕೇಜ್ರಿವಾಲ್ ಅವರ ರಕ್ತದಲ್ಲಿನ ಸಕ್ಕರೆ ಪ್ರಮಾಣ ಸಂಜೆ 7 ಗಂಟೆ ವೇಳೆಗೆ 217 ಆಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

# ಸಿಲಿಂಡರ್ ಗೆದ್ದೇ ಗೆಲ್ಲುತ್ತೆ : ವಿನಯ್‌ಕುಮಾರ್ ವಿಶ್ವಾಸ



ದಾವಣಗೆರೆ, ಏ.23- ನನಗೆ ಗ್ಯಾಸ್ ಸಿಲಿಂಡರ್ ಅಧಿಕೃತವಾಗಿ ಸಿಕ್ಕಿದ್ದು, ಲೋಕಸಭೆ ಚುನಾವಣೆಯಲ್ಲಿ ಸಿಲಿಂಡರ್ ಗೆಲ್ಲುತ್ತದೆ. ಜನರು ಈಗಾಗಲೇ ನನ್ನನ್ನು ಗೆಲ್ಲಿಸಲು ನಿರ್ಧರಿಸಿದ್ದಾರೆ ಎಂದು ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ತಮ್ಮ ಗೃಹ ಕಚೇರಿಯಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ನನಗೆ ಮತ ನೀಡಿ ಗೆಲ್ಲಿಸಿದರೆ ಪ್ರಜಾಪ್ರಭುತ್ವದ ಗೆಲುವು ಆಗುತ್ತದೆ. ನ್ಯಾಯಸಮ್ಮತ, ಶಾಂತಿಯುತ, ಕಳಂಕ ರಹಿತ ಚುನಾವಣೆ ಎದುರಿಸೋಣ. ಆದ್ರೆ, ವಿನಾಕಾರಣ ತೇಜೋವಧೆ ಮಾಡುವುದು ಸರಿಯಲ್ಲ. ನಾಮಪತ್ರ ವಾಪಸ್ ದಿನ ಅಂತ್ಯವಾಗಿದೆ. ಈಗ ಅಧಿಕೃತವಾಗಿ ಕಣಕ್ಕಿಳಿದಿದ್ದೇನೆ. ಚುನಾವಣೆಯಿಂದ ಹಿಂದೆ ಸರಿಯುತ್ತೇನೆ ಎಂದುಕೊಂಡವರಿಗೆ ನಿರಾಸೆ ಆಗಿದೆ ಎಂದು ಹೇಳಿದರು.

ಬೂತ್ ಮಟ್ಟದ ಏಜೆಂಟ್ ಗಳನ್ನು ಗುರುತಿಸಿದ್ದೇವೆ. ನಮ್ಮಲ್ಲಿ ಯಾವ ಮುಖಂಡರೂ ಇಲ್ಲ. ಹೊಸ ನಾಯಕರು ತಯಾರಾಗುತ್ತಿದ್ದಾರೆ. ಜವಾಬ್ದಾರಿ ಕೊಡಲು ಸಭೆ ನಡೆಸಿದ್ದೇವೆ. ಪ್ರತಿಯೊಂದು ಮನೆಗೂ ತೆರಳಿ ಗ್ಯಾಸ್ ಸಿಲಿಂಡರ್ ಗುರುತು ಸಿಕ್ಕಿ ದ್ದು, ಇದಕ್ಕೆ ಮತ ಚಲಾಯಿಸುವಂತೆ ಜನರಿಗೆ ಮನದಟ್ಟು ಮಾಡಿಕೊಡಲಾಗುವುದು ಎಂದರು.

ಬಿಜೆಪಿ, ಕಾಂಗ್ರೆಸ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಸಮಾಧಾನಿತರು ಇದ್ದು, ಅವರು ಬೆಂಬಲ ನೀಡುತ್ತಿದ್ದಾರೆ. ಬಿಜೆಪಿಯಲ್ಲಿ ಕುಟುಂಬ ರಾಜಕಾರಣ ಇಲ್ಲ ಎಂದುಕೊಂಡಿದ್ದೆವು. ಈಗ ಅಲ್ಲಿಯೂ ಶುರುವಾಗಿದೆ. ಕಾಂಗ್ರೆಸ್ ನಲ್ಲಿ ಒಂದೇ ಮನೆಗೆ ಮೂರು ಅಧಿಕಾರ ಇದೆ. ಒಬ್ಬರು ಸಚಿವರು, ಮತ್ತೊಬ್ಬರು ಶಾಸಕರು, ಮೂರನೆಯವರು ಸಂಸದರಾದರೆ ಕಷ್ಟ ಎಂಬ ಕಾರಣಕ್ಕೆ ಜನರು ಕಾಂಗ್ರೆಸ್ ಬೆಂಬಲಿಸುವುದಿಲ್ಲ. ಹಾಗಾಗಿ ಬಿಜೆಪಿ ಮತ್ತು ಜಿ. ಬಿ. ವಿನಯ್ ಕುಮಾರ್ ನಡುವೆ ಪೈಪೋಟಿ ನಡೆಯಲಿದೆ ಎಂದು ತಿಳಿಸಿದರು.

ನಾನು ತಯಾರು ಮಾಡಿದ್ದ ಪಿಚ್ ಮೇಲೆ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳು ಬ್ಯಾಟಿಂಗ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ನಾನು ಕಳೆದ ಒಂದು ವರ್ಷದಿಂದ ಹಳ್ಳಿಗಳಿಗೆ ಹೋಗಿ ಬಂದಿದ್ದೇನೆ. ಇನ್ನು 50 ರಿಂದ 60 ಹಳ್ಳಿಗಳಿಗೆ ಹೋಗುತ್ತೇನೆ. ಜನರು ನಮ್ಮೂರಿಗೆ ಬನ್ನಿ ಎಂದು ಈಗಲೂ ಕರೆಯುತ್ತಿದ್ದಾರೆ. ಇನ್ನೊಂದು ವಾರದಲ್ಲಿ ಈ ಗ್ರಾಮಗಳಿಗೆ ಹೋಗಿ ಪ್ರಚಾರ ಮಾಡುತ್ತೇನೆ. ಶೇ. 90 ರಷ್ಟು ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ. ಒಂದು ಕ್ಷೇತ್ರದಲ್ಲಿ ಹತ್ತಿಪ್ಪತ್ತು ಹಳ್ಳಿಗಳಿಗೆ ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳು ಹೋಗುತ್ತಿದ್ದರೂ, ಜನರ ಬೆಂಬಲ ಮಾತ್ರ ನನಗೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನನ್ನ ಬಗ್ಗೆಯೇ ಈಗ ಎಲ್ಲರಿಗೂ ಕುತೂಹಲ. ನನ್ನ ಮೇಲೆ ಕಣ್ಣಿಟ್ಟಿರುವುದು ಒಳ್ಳೆಯ ಸೂಚನೆ. ನಾನು ಗೆಲ್ಲುತ್ತೇನೆ ಎಂದುಕೊಂಡು ಮಾರಿಕಣ್ಣು ಹೋರಿ ಮೇಲೆ ಎನ್ನೋ ಹಾಗೆ ನನ್ನ ಮೇಲಿದೆ. ಹುಷಾರಿರಲು ಪ್ರಯತ್ನಪಡುತ್ತಿದ್ದೇನೆ. ಎಲ್ಲೂ ತಪ್ಪಾಗದ ರೀತಿಯಲ್ಲಿ ನಡೆಯುತ್ತೇವೆ. ಚುನಾವಣಾ ಆಯೋಗದ ನಿಯಮದ ಪ್ರಕಾರ ಚುನಾವಣೆ ಎದುರಿಸುತ್ತೇನೆ. ಏನೂ ತೊಂದರೆ ಆಗಲ್ಲ ಎಂಬುದು ನನ್ನ ಭಾವನೆ ಎಂದರು.

ಕಾಂಗ್ರೆಸ್, ಬಿಜೆಪಿ ಎಂದು ಹೋಗಬೇಡಿ. ಮೋದಿ ಅವರಿಗೆ ಒಂದು ಸ್ಥಾನ ಹೋದರೆ ನಷ್ಟ ಆಗಲ್ಲ, ಒಂದು ಸ್ಥಾನದಲ್ಲಿ ಕಾಂಗ್ರೆಸ್ ಸೋತರೂ ಏನೂ ಆಗಲ್ಲ. ಯಾವುದೇ ಒಂದು ಸಮುದಾಯ ಒಂದು ಪಕ್ಷಕ್ಕೆ ಅನಿವಾರ್ಯವಾಗಿ ಮತ ಹಾಕುತ್ತಿತ್ತು. ಈಗ ಬೇರೊಂದು ಅವಕಾಶ ಇದೆ. ಮುಕ್ತವಾಗಿ, ತತ್ವ, ಸಿದ್ಧಾಂತಕ್ಕೆ ಅಂಟಿಕೊಳ್ಳದೇ ವ್ಯಕ್ತಿ ನೋಡಿ, ಕೆಲಸ ಗಮನಿಸಿ ಮತ ನೀಡಿ. ವ್ಯಕ್ತಿ ನೋಡಿ ವೋಟ್ ಮಾಡಿ ಎಂದು ಮನವಿ ಮಾಡಿದರು.

> ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯ ಇಬ್ಬರೂ ನನ್ನ ಪರವಾಗಿ ಪ್ರಚಾರ ಮಾಡುತ್ತಾರೆ. ಸಿದ್ದರಾಮಯ್ಯರ ಅನ್ನಭಾಗ್ಯ ಯೋಜನೆಯಡಿ ಅನ್ನ ಮಾಡಲು ಸಿಲಿಂಡರ್ ಬೇಕು. ನರೇಂದ್ರ ಮೋದಿ ಅವರು ಬಂದರೆ ಉಜ್ವಲ ಯೋಜನೆಯಡಿ ಗ್ಯಾಸ್ ಸಿಲಿಂಡರ್ ನೀಡಿದ್ದೇವೆ ಎಂದು ಹೇಳಿ ಮತ ಕೇಳುತ್ತಾರೆ. ಯಾರು ಮಾತನಾಡಿದರೂ ಗ್ಯಾಸ್ ಸಿಲಿಂಡರ್ ಬಗ್ಗೆನೇ ಮಾತನಾಡುತ್ತಾರೆ. ಸಿಲಿಂಡರ್‌ಗೆ ಈ ಚುನಾವಣೆಯಲ್ಲಿ ಗೆಲ್ಲುತ್ತದೆ.
>
> **- ಜಿ. ಬಿ. ವಿನಯ್ ಕುಮಾರ್**
> ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ

## ನಗರದಲ್ಲಿ ಇಂದು ಮಜ್ಜಿಗೆ ವಿತರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ 1 ತಿಂಗಳು ನಡೆಸುತ್ತಿರುವ ಮಜ್ಜಿಗೆ ವಿತರಣಾ ಕಾರ್ಯಕ್ರಮಕ್ಕೆ ಶ್ರೀಮತಿ ತ್ರಿವೇಣಿ ಶ್ರೀ ಡಾ.ಪಿ.ಮಲ್ಲೇಶ್ ಮತ್ತು ಕುಟುಂಬದವರು, ಎನ್. ರೇವಣಸಿದ್ದಪ್ಪ, ಜಗಮೋಹನ ತುಳಸಿಯಾನ ಅವರು ಇಂದಿನ ದಾನಿಗಳಾಗಿದ್ದಾರೆ. ಈ ಸತ್ಕಾರ್ಯಕ್ಕೆ ದಾನ ಮಾಡ ಬಯಸುವವರು ಮಂಜುಳಾ ಬಸವಲಿಂಗಪ್ಪ (7483809312) ಅವರನ್ನು ಸಂಪರ್ಕಿಸಬಹುದು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಬಿ.ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ, ಮತ್ತಿತರೆ ಪ್ರದೇಶ ಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್‌ವ್ಯತ್ಯಯವಾಗಲಿದೆ.

## ಇಂದು ಸೈಕಲ್ ಜಾಥಾ

ಮತದಾರರ ಜಾಗೃತಿ ಅಂಗವಾಗಿ ಇಂದು ಬೆಳಿಗ್ಗೆ 7 ಕ್ಕೆ ಅನುಭವ ಮಂಟಪ ಶಾಲೆಯಿಂದ ಜಿಲ್ಲಾ ಕ್ರೀಡಾಂಗಣ ದವರೆಗೆ ಸೈಕಲ್ ಜಾಥಾ ಏರ್ಪಡಿಸಲಾಗಿದೆ.


**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ., ದಾವಣಗೆರೆ.**

**ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ**

ಮಾನ್ಯ ಷೇರುದಾರರೆ ಮತ್ತು ಗ್ರಾಹಕರೇ,

ನಮ್ಮ ಸಂಘದ ನೂತನ ಕಟ್ಟಡವನ್ನು 3ನೇ ಮುಖ್ಯರಸ್ತೆ, 16ನೇ ತಿರುವು, ಕೆ.ಟಿ.ಜೆ. ನಗರ, ದಾವಣಗೆರೆ ಇಲ್ಲಿ ನಿರ್ಮಿಸಲಾಗಿದ್ದು, ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ದಿ. 25.04.2024ರ ಗುರುವಾರ ಬೆಳಿಗ್ಗೆ 10.30ಕ್ಕೆ ಸಲ್ಲುವ ಶುಭ ಮುಹೂರ್ತದಲ್ಲಿ ಸರಳ ಪೂಜಾ ಸಮಾರಂಭದೊಂದಿಗೆ ನೆರವೇರಿಸಲಾಗುವುದು. ಸಂಘದ ಸದಸ್ಯರು, ಗ್ರಾಹಕರು, ಆತ್ಮೀಯರು ಈ ಶುಭ ಸಂದರ್ಭದಲ್ಲಿ ಹಾಜರಿದ್ದು, ಶುಭ ಹಾರೈಸಬೇಕಾಗಿ ವಿನಂತಿ.

**ತಮ್ಮ ಆಗಮನಾಭಿಲಾಷಿಗಳು ; ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ**



**ತೃತೀಯ ವರ್ಷದ ಪುಣ್ಯ ಸ್ಮರಣೆ**





**ಲಿಂ|| ಶ್ರೀಯುತ ಮಾಗಾನಹಳ್ಳಿ ಓಂಕಾರಪ್ಪನವರು**
ನಿವೃತ್ತ ಮ್ಯಾನೇಜರ್ ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.
ಜನನ : 03.04.1939, ಮರಣ : 03.04.2021

**ಲಿಂ|| ಶ್ರೀಮತಿ ಎಂ.ಜಿ. ನೀಲಮ್ಮ ಓಂಕಾರಪ್ಪನವರು**
ನಿವೃತ್ತ ಉಪನ್ಯಾಸಕಿ, ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರ (ಡಯಟ್), ದಾವಣಗೆರೆ.
ಜನನ : 05.08.1940, ಮರಣ : 24.04.2021

ಇಂದಿಗೆ ನೀವು ನಮ್ಮನ್ನು ಅಗಲಿ ಮೂರು ವರ್ಷಗಳಾದವು ಸದಾ ನಿಮ್ಮಗಳ ನೆನಪಿನಲ್ಲಿ ತಾವುಗಳು ನಮಗೆ ಹಾಕಿಕೊಟ್ಟ ಆದರ್ಶ, ಸಲಹೆ, ಸೂಚನೆ, ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಸದಾ ನಿಮ್ಮಗಳ ನೆನಪಿನಲ್ಲಿರುವ...

ಮಕ್ಕಳಾದ : ◆ ಶ್ರೀಮತಿ ಸರಳ ಪಿ. ಗಂಗಾಧರಪ್ಪ
◆ ಶ್ರೀಮತಿ ಸವಿತ ಎಸ್. ಜಯಪ್ಪ
◆ ಶ್ರೀ ಎಂ.ಓ. ನಿರಂಜನ, Prop. M/s Synergy Engineering, Davangere.

ಮೊಮ್ಮಕ್ಕಳು : ಡಾ|| ಪಿ.ಜಿ. ದೈವೀಕ್
MBBS., M.D., (Psychiatrists) Duty Doctor at Nimhans Hospital, Jaynagara, Bangalore.
ಚಿ|| ಪಿ.ಜಿ. ಸ್ವಸ್ತಿಕ್
M.S., (TATA Institute)., Phd., Research Scientist, Newyork, USA.,
ಚಿ|| ಜೆ. ಸಾತ್ವಿಕ್, M.Sc.,
ಕುಮಾರಿ ಮುಮುಕ್ಷ ನಿರಂಜನ

ಹಾಗೂ ಆಪ್ತ ಬಂಧು-ಮಿತ್ರರು, ಮೊ. : 70198 47517, 94821 08009


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas